ವಿತ್ತೀಯ ಕಾರ್ಯಕಲಾಪಗಳು :

೧೯೮೬–೮೭ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಡಿಮ್ಯಾಂಡ್ ಸಂ. ೨೧ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು

ಶ್ರೀ ಜಿ. ಬಸವಣ್ಣಪ್ಪ (ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸಂಬರಾಜುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೭,೦೨,೯೪.೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೬,೬೦.೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

(ಡಿಮ್ಯಾಂಡ್ ಸಂ. ೨೨ ಅರಣ್ಯ)

ಶ್ರೀ ಬಿ.ಎ. ಜೀವಿಜಯ (ಮಾನ್ಯ ಅರಣ್ಯ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೫.೬೧,೧೦ ೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಡಿಮ್ಯಾಂಡ್ ಸಂ. ೨೪ ವಾಹನ ತೆರಿಗೆ, ೩೧–ಗೃಹ ನಿರ್ಮಾಣ ಮತ್ತು ೨೮–ರಸ್ತೆ ಸಾರಿಗೆ

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಮಾನ್ಯ ಸಾರಿಗೆ ಮತ್ತು ವಸತಿ ಸಚಿವರು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೯೩,೯೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಹಾಗೂ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ ಖಾತೆಯಲ್ಲಿ ೧೨೫,೬೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೩,೩೪,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಮತ್ತು ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೮೭ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹ ನಿರ್ಮಾಣಕ್ಕೆ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು) ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೩.೭೦.೬೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭,೮೬,೮೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಈಗ ಎಲ್ಲಾ ಬೇಡಿಕೆಗಳೂ ಸಭೆಯ ಮುಂದೆ ಇವೆ. ಈಗ ಮೊದಲನೆಯದಾಗಿ ಮಾನ್ಯ ಪಟಮಕ್ಕಿ ರತ್ನಾಕರ್ ಅವರು ಮಾತನಾಡಲಿ.

†ಶ್ರೀ ಪಟಮಕ್ಕಿ ರತ್ನಾಕರ್ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಮೂರು ಜನ ಮಂತ್ರಿಗಳು ಮಂಡಿಸಿರತಕ್ಕ ಆಹಾರ ಮತ್ತು ನಾಗರೀಕ ಸರಬರಾಜು, ಅರಣ್ಯ ಸಾರಿಗೆ ಮತ್ತು ವಸತಿ, ಈ ಇಲಾಖೆಯ ಬೇಡಿಕೆಗಳು ಹಲವು ದೋಷಗಳ ಜೊತೆಗೆ ಜನಸಾಮಾನ್ಯರ ಭಾವನೆಗಳಿಗೆ ಸ್ವಲ್ಪ ದೂರ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇನ್ನು ಆಹಾರ ಸಂಗ್ರಹಣೆ ಮತ್ತು ವಿತರಣೆ ವಿಷಯದಲ್ಲಿ ಹೇಳುವುದಾದರೆ ಕೇಂದ್ರ ಸರ್ಕಾರದವರ ಸಹಾಯ ಕೇಳಬೇಕಾಗುತ್ತದೆ. ಅಲ್ಲದೆ ಇಲ್ಲಿ ಕರ್ನಾಟಕ ಫುಡ್ ಕಾರ್ಪೊರೇಷನ್ನಿನವರೂ ಇದರ ಬಗ್ಗೆ ಹೆಚ್ಚು ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡಬೇಕಾಗಿದೆ. ಇದರಲ್ಲಿ ರಾಜ್ಯ ಸರ್ಕಾರದ ಜವಾಬ್ದಾರಿಯೂ ಇದೆ. ರಾಜ್ಯ ಸರ್ಕಾರ ಮತ್ತು ಫುಡ್ ಕಾರ್ಪೊರೇಷನ್ ಸೇರಿಕೊಂಡು ರಾಜ್ಯಕ್ಕೆ ಬೇಕಾಗುವ ವಿವಿಧ ರೀತಿಯ ಆಹಾರಧಾನ್ಯಗಳನ್ನು ಸಂಗ್ರಹಣೆ ಮಾಡದೇ ಹೋದರೆ ನಮ್ಮ ಬೇಡಿಕೆಯನ್ನು ಪೂರೈಸುವುದಕ್ಕಾಗುವುದಿಲ್ಲ. ಈ ಬಗ್ಗೆ ಸಮಂಜಸವಾದ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಂಡು ಆಹಾರ ಸಂಗ್ರಹಣೆ ಮಾಡಬೇಕು ಎಂದು ನಾನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಬರೇ ಸಂಗ್ರಹಣೆ ಮಾಡುವುದಲ್ಲ ಇದರ ಜೊತೆಗೆ ಈವೊತ್ತಿನ ದಿವಸ ರೈತ ಬೆಳೆಯುತಕ್ಕಂಥ ಬೆಳೆಗೆ ಯೋಗ್ಯ ದರ ಕೊಡುವ ಹಾಗೆ ಸರ್ಕಾರ ಪ್ರಯತ್ನ ಮಾಡಬೇಕು. ಇದು ಸರ್ಕಾರದ ಜವಾಬ್ದಾರಿ. ಈ ಕೆಲಸ ನಮ್ಮ ರಾಜ್ಯದಲ್ಲಿ ಆಗಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಈವೊತ್ತಿನ ದಿವಸ ರೈತನಿಗೆ ತಾನು ಬೆಳೆದ ಧಾನ್ಯಕ್ಕೆ, ತಾನು ಇದಕ್ಕಾಗಿ ಪಡುವಂಥಾ ಶ್ರಮಕ್ಕೆ ಸರಿಯಾದ ರೀತಿಯಲ್ಲಿ ತಕ್ಕ ಪ್ರತಿಫಲ ದೊರೆಯುತ್ತಾ ಇಲ್ಲ. ಆತನ ಶ್ರಮಕ್ಕೆ ತಕ್ಕಂತೆ ಹೆಚ್ಚು ಪ್ರತಿಫಲ ಸಿಗುವ ಹಾಗೆ ಮಾಡದೇ ಹೋದರೆ ದೈಹಿಕವಾಗಿ, ಆರ್ಥಿಕವಾಗಿ ಅವನು ಮುಂದೆ ಬರಲು ಸಾಧ್ಯವಿಲ್ಲ. ಅಷ್ಟೇ ಅಲ್ಲದೆ ಈವೊತ್ತಿನ ದಿವಸ ರೈತನು ಉಪಯೋಗಿಸತಕ್ಕಂಥಾ ಉಪಕರಣಗಳು ಏನು ಪೆಟ್ರೋಲ್, ಸಿಮೆಂಟ್ ಗೊಬ್ಬರ ಇತ್ಯಾದಿ ಇವೆ, ಇವುಗಳ ಬೆಲೆ ಏರಿರುವಾಗ ಇವನು ಬೆಳೆದಂಥಾ ಬೆಳೆಗೆ ಮಾತ್ರ ಸರಿಯಾಗಿ ದರ ಬಾರದೇ ಹೋದರೆ ಅವನು ಸುಧಾರಿಸಿಕೊಳ್ಳುವುದು ಕಷ್ಟವಾಗುತ್ತದೆ. ಅವನು ಸಮಾಜದಲ್ಲಿ ಇತರರಂತೆ ಬಾಳುವುದು ಕಷ್ಟವಾಗುತ್ತದೆ. ಒಂದೊಂದೂ ಏರುಪೇರುಗಳು ಇರುತ್ತವೆ. ಇದರಿಂದ ರೈತನು ಹೆಚ್ಚು ಲಾಭ ಪಡೆಯುವುದಕ್ಕೆ ಸಾಧ್ಯವಿಲ್ಲ. ತಾವು ಆ ರೈತ ಆದಾಯವನ್ನು ಗಮನಿಸಿ ಅವನ ಕಷ್ಟವನ್ನೂ ಸಹ ನೋಡಿ ಪರಿಹಾರ ನೀಡಬೇಕು. ಅವನು ಕೊಂಡು ಕೊಳ್ಳತಕ್ಕಂಥಾ ಗೊಬ್ಬರಕ್ಕಾಗಲಿ, ಸಿಮೆಂಟ್‌ಗಾಗಲಿ ಇತರೇ ಉಪಕರಣಗಳಿಗಾಗಲಿ ಸಬ್ಸಿಡಿ ದರದಲ್ಲಿ ಕೊಡುವುದಾದರೆ ಆವಾಗ ರೈತನಿಗೆ ಒಳ್ಳೆಯದಾಗುತ್ತದೆ. ಸರ್ಕಾರದವರು ರೈತರ ಭಾವನೆಗಳನ್ನು ಅರಿತುಕೊಂಡು ಅವನ ಶ್ರಮಕ್ಕೆ ತಕ್ಕ ಹಾಗೆ ತಕ್ಕ ಪ್ರತಿಫಲ ದೊರೆಯುವ ಹಾಗೆ ಮಾಡಿಕೊಟ್ಟರೆ ಅದರಿಂದ ರೈತನಿಗೆ ಅನುಕೂಲವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ತರಕಾರಿ ಏನು ಬೆಳೆಯುತ್ತಾರೆ ಇದು ಒಂದು ಲಾಭದಾಯಕವಾದ ಉದ್ಯೋಗ. ಕರ್ನಾಟಕ ರಾಜ್ಯದಲ್ಲಿ ಇದನ್ನು ಇನ್ನೂ ಹೆಚ್ಚು ಬೆಳೆಸಲಿಕ್ಕೆ ಅವಕಾಶ ಇದೆ. ಇಲ್ಲಿಯ ತರಕಾರಿ ಬೇರೆ ರಾಜ್ಯಗಳಿಗೂ ಹೋಗುತ್ತಾ ಇದೆ. ಇದರ ಬಗ್ಗೆ ನಾನು ಕಳೆದ ಅಧಿವೇಶನದಲ್ಲೂ ಹೇಳಿದ್ದೆ. ಇದು ಒಂದು ಒಳ್ಳೆಯ ಲಾಭದಾಯಕವಾದ ಉದ್ಯೋಗ ಆಗಿರುವುದರಿಂದ ಇದರಲ್ಲಿರುವ ದಳ್ಳಾಳಿಗಳ ಶೋಷಣೆಯನ್ನು ತಪ್ಪಿಸಿದರೆ ಈ ಒಂದು ಉದ್ಯೋಗ ಆರ್ಥಿಕವಾಗಿ ಇನ್ನೂ ಹೆಚ್ಚು ಲಾಭದಾಯಕವಾಗಿ ಪರಿಣಮಿಸುತ್ತದೆ. ಈ ಒಂದು ನಿಟ್ಟಿನಲ್ಲಿ ಸರ್ಕಾರ ದಿಟ್ಟ ಹೆಜ್ಜೆಯನ್ನಿಟ್ಟು ಆ ರೈತರ ಕಷ್ಟವನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಪಟ್ಟಣ ಪ್ರದೇಶಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಈ ನ್ಯಾಯ ಬೆಲೆಯ ಅಂಗಡಿಯ ಮೂಲಕ, ಅಥವಾ ಸೊಸೈಟಿಗಳ ಮೂಲಕ ಅಗತ್ಯವಾದ ವಸ್ತುಗಳನ್ನು ವಿತರಣೆ ಮಾಡುವ ಕಾರ್ಯಕ್ರಮವನ್ನು ಸರ್ಕಾರ ಕೈಗೊಂಡಿದೆ. ಇತ್ತೀಚೆಗೆ ಸರ್ಕಾರದವರು ಬಡವರಿಗೆ ೧ ಕೆ. ಜಿ. ಅಕ್ಕಿಯನ್ನು ಎರಡು ರೂಪಾಯಿನಂತೆ ಕೊಡುತ್ತೇವೆಂದ ಘೋಷಣೆ ಮಾಡಿದ್ದು ಎಲ್ಲರಿಗೂ ಗೊತ್ತೇ ಇದೆ. ಮಾನ್ಯ ಅಧ್ಯಕ್ಷರೇ, ಈ ವಿಚಾರವಾಗಿ ಹೇಳಬೇಕಾದರೆ ಇವರು ಕೊಡುವಂಥಾ ಒಂದು ಕೆ. ಜಿ. ಅಕ್ಕಿಗೆ ಸುಮಾರು ೬೭ ಪೈಸೆಯಷ್ಟು ಸಬ್ಸಿಡಿಯನ್ನು ಕೇಂದ್ರ ಸರ್ಕಾರ ಕೊಡುತ್ತದೆ. ಇದರಲ್ಲಿ ರಾಜ್ಯ ಸರ್ಕಾರದ ಸಬ್ಸಿಡಿ ಕೇವಲ ೮ ಪೈಸೆ, ಮಾತ್ರ ಆಗುತ್ತದೆ. ಆದರೆ ಇವರು ಕೊಡತಕ್ಕಂಥಾ ಸಬ್ಸಿಡಿ ಕೇವಲ ೮ ಪೈಸೆ ಪ್ರಚಾರ ನೋಡಿದರೆ ಸಾಹಿತ್ಯದ ಮುಖಾಂತರ, ಇನ್ನೂ ಕೆಲವು ಘೋಷಣೆಗಳ ಮುಖಾಂತರ ಆಗುವುದು ಬಹಳ. ಜನರು ತಿಳಿದುಕೊಳ್ಳುವುದು ಇವರ ಘೋಷಣೆಯಿಂದ ಸರ್ಕಾರ ಏನೋ ಬಹಳಷ್ಟು ಕೆಲಸ ಮಾಡಿದೆ ಎಂದು. ಇದರಲ್ಲಿ ಕೇಂದ್ರ ಸರ್ಕಾರದ ಸಬ್ಸಿಡಿ ೬೭ ಪೈಸೆ ಏನು ಇದೆ ಅದನ್ನು ಮರೆಮಾಚಿ ಇವರು ಕೊಡತಕ್ಕಂಥ ಸಬ್ಸಿಡಿ ೮ ಪೈಸೆ ಏನು ಇದೆ ಇದನ್ನು ದೊಡ್ಡದನ್ನಾಗಿ ತೋರಿಸಿಕೊಂಡು ಈ ಒಂದು ಕೆಲಸವನ್ನು ಮಾಡಿದ್ದಾರೆ.

ಶ್ರೀ ಬಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇನ್ನೂ ಯುವಕರು. ಅವರು ಇದರ ಬಗ್ಗೆ ಇನ್‌ಷಿಯೇಟ್ ಮಾಡಿದ್ದು ಇದೇ ಪ್ರಥಮವಾಗಿದ್ದರೂ ಚೆನ್ನಾಗಿ ಮಾತನಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮಾನ್ಯ ಸದಸ್ಯರು ಇದುವರೆಗೆ ಏನು ಮಾತನಾಡಿದರು ಅದರಲ್ಲಿ ಕೆಲವು ಸತ್ಯವಾದ ವಿಷಯಗಳನ್ನೂ ಮಾತನ್ನಾಡಿದ್ದಾರೆ. ಅವರು ಹೇಳಿದ ಅಸತ್ಯವಾದ ವಿಷಯ ಏನೆಂದರೆ ಕೇಂದ್ರ ಸರ್ಕಾರ ಇದರ ಬಗ್ಗೆ ಸಬ್ಸಿಡಿ ಕೊಡುವುದು ಏನು ಇದೆ, ಆದರೆ ಅವರು ಸಬ್ಸಿಡಿ ಕೊಡುವುದಿಲ್ಲ ಅಂತ ಹೇಳುವುದಿಲ್ಲ ಇದರಲ್ಲಿ ರಾಜ್ಯ ಸರ್ಕಾರ ಕೇವಲ ೮ ಪೈಸೆ ಮಾತ್ರ ಸಬ್ಸಿಡಿ ಕೊಡುವುದು ಅಂತ ಏನು ಹೇಳಿದ್ದಾರೆ, ಅದಕ್ಕೆ ಬೇಕಾದರೆ ನಾನು ಪೂರಕವಾಗಿ ಅಂಕಿಅಂಶ ಕೊಡುವುದಕ್ಕೆ ತಯಾರಾಗಿದ್ದೇನೆ. ಅವರು ಈರೀತಿಯಾದ ಒಂದು ಹೇಳಿಕೆ ಕೊಡುವುದು ಬಹಳ ವಿಷಾದಕರ. ಇದರ ಬಗ್ಗೆ ನಾನು ಉತ್ತರ ಕೊಡುವಾಗ ಸವಿಸ್ತಾರವಾಗಿ ಉತ್ತರ ಕೊಡುತ್ತೇನೆ. ಈಗ ಅಕ್ಕಿಯನ್ನು ಒಂದು ಕ್ವಿಂಟಾಲ್‌ಗೆ ೨೪೪ ರೂಪಾಯಿಯಂತೆ ಕೇಂದ್ರ ಸರ್ಕಾರ ನಿಗದಿ ಮಾಡಿದೆ. ಮತ್ತೆ ೧೪ ರೂಪಾಯಿ ಇತ್ತೀಚೆಗೆ ಅವರು ಜಾಸ್ತಿ ಮಾಡಿದ್ದಾರೆ. ಅಲ್ಲಿಗೆ ಒಟ್ಟು ಒಂದು ಕ್ವಿಂಟಾಲ್‌ಗೆ ೨೫೮ ರೂಪಾಯಿ ಬಿದ್ದ ಹಾಗಾಯಿತು. ಇನ್ನು ಇದರ ಬಗ್ಗೆ ಟ್ರಾನ್ಸ್‌ಪೋರ್ಟ್ ವಗೈರೆ ಲೆಕ್ಕಾಚಾರ ಹಾಕಿದರೆ ಅವೆಲ್ಲಾ ಸೇರಿ ಅಕ್ಕಿ ಒಂದು ಕೆ. ಜಿ.ಗೆ ೩ ರೂಪಾಯಿ ಆಗುತ್ತದೆ. ನಾವು ಅವರಿಗೆ ಎರಡು ರೂಪಾಯಿ ನಂತೆ ಏನು ಕೊಡುತ್ತೇವೋ ಅದರಲ್ಲಿ ೯೦ ಪೈಸೆ ಅಥವಾ ಒಂದು ರೂಪಾಯಿನಂತೆ ನಮ್ಮ ಸರ್ಕಾರದ ಸಬ್ಸಿಡಿ ಇರುತ್ತದೆ. ೮ ಪೈಸೆ ಅಲ್ಲ. ಆದದರಿಂದ ಮಾನ್ಯ ಸದಸ್ಯರು ಹೇಳಿದ ವಿಚಾರ ಸತ್ಯಕ್ಕೆ ದೂರವಾದ ವಿಚಾರ. ತಮಗೆ ಹೇಳಬೇಕಾದರೆ ೧೯೮೪-೮೫ರಲ್ಲಿ ಈ ಯೋಜನೆಗೆ ಹಣವನ್ನು ೨೩ ಕೋಟಿ ರೂಪಾಯಿ ಇಡಲಾಗಿತ್ತು. ಅಲ್ಲಿಗೆ ನಾವು ೨೩ ಕೋಟಿ ರೂಪಾಯಿಗಳಷ್ಟು ಸಬ್ಸಿಡಿಯನ್ನು ಕೊಟ್ಟಿದ್ದೇವೆ ಪ್ರಸ್ತುತ ವರ್ಷದಲ್ಲಿ ೩೪ ಕೋಟಿ ರೂಪಾಯಿ ಸಬ್ಸಿಡಿಕೊಡುವುದಕ್ಕೆ, ಈ ಯೋಜನೆಯ ವೆಚ್ಚಕ್ಕಾಗಿ ಮೀಸಲಾಗಿಟ್ಟಿದ್ದೇವೆ.

ಶ್ರೀ ಪಟವರ್ಧನಿ ರತ್ನಾಕರ್.—ಮಾನ್ಯ ಮಂತ್ರಿಗಳು ಕೆಲವು ವಿಚಾರಗಳನ್ನು ಈ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ. ನನಗೆ ದೊರೆತಿರತಕ್ಕಂಥಾ ಮಾಹಿತಿ ಪ್ರಕಾರ ಹೇಳಿದೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಕೇಂದ್ರಸರ್ಕಾರದವರೂ ಕೂಡ ಇದಕ್ಕೆಲ್ಲಾ ಒಟ್ಟು ಇಷ್ಟು ಅಂತ ಸಬ್ಸಿಡಿ ಕೊಡುತ್ತಾರಲ್ಲಾ.

ಶ್ರೀ ಬಿ. ಬಸವಣ್ಣಪ್ಪ.—ಅವರು ಒಟ್ಟು ೧೩೫೧೫ ಕೋಟಿ ರೂಪಾಯಿಯಷ್ಟು ಸಬ್ಸಿಡಿ ಗೋಸ್ಕರ ಪ್ರಾವಿಷನ್ ಮಾಡಿದ್ದಾರೆ. ಆದರೆ ನನಗೆ ಇದರ ಬಗ್ಗೆ ನಿಖರವಾದ ಅಂಕಿ ಅಂಶ ಇಲ್ಲ.

ಶ್ರೀ ಪಟವರ್ಧನಿ ರತ್ನಾಕರ್.—ಇದರ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ಈಗ ನಾನು ತಯಾರಿಲ್ಲ. ಮಾನ್ಯ ಸಚಿವರು ಹೇಳಿರತಕ್ಕಂಥ ವಿಚಾರಗಳನ್ನೂ, ಅಂಕಿಅಂಶಗಳನ್ನೂ ನಾನು ಅಧ್ಯಯನ ಮಾಡಿದ ನಂತರ ಹೇಳುತ್ತೇನೆ. ಆದುದರಿಂದ ನಾನು ಈಗ ಮಾನ್ಯ ಸಚಿವರ ವಿಚಾರಕ್ಕೆ ಹೆಚ್ಚು ಪುರಸ್ಕಾರ ಕೊಡುವುದಿಲ್ಲ. ನನ್ನ ಒಟ್ಟು ಅಭಿಪ್ರಾಯ ಏನೆಂದರೆ ಕೇಂದ್ರ ಸರ್ಕಾರದವರು ಕೊಡತಕ್ಕಂಥಾ ಸಬ್ಸಿಡಿ ಹಣವನ್ನು ಉಪಯೋಗಿಸಿಕೊಂಡು ಬಡವರಿಗೆ ಆಹಾರಧಾನ್ಯವನ್ನು ಸಬ್ಸಿಡಿ ರೇಟ್‌ನಲ್ಲಿ ಒದಗಿಸಬೇಕು ಅಂತ ಏನು ಇದ್ದೀರೋ ಅದು ಆ ಜನಗಳಿಗೆ ನೇರವಾಗಿ ತಲುಪಿಸತಕ್ಕಂಥಾ ಕಾರ್ಯವಾಗಬೇಕು ಈ ಕಾರ್ಯದಲ್ಲಿ ಎಲ್ಲೂ ಲೋಪವಾಗಬಾರದು. ಕೇಂದ್ರಸರ್ಕಾರದವರು ಈ ಬಡ ಜನಗಳಿಗೆ ಕೊಡತಕ್ಕಂಥಾ ಹಣ ಏನು ಇದೆ, ಇದನ್ನು ರಾಜ್ಯ ಸರ್ಕಾರದವರೇ ಕೊಡುತ್ತಿದ್ದಾರೆ, ಎನ್ನುವ ಭಾವನೆ ಜನರಲ್ಲಿ ಸೃಷ್ಟಿ ಮಾಡತಕ್ಕಂಥ ಕೆಲಸ ಏನು ಮಾಡುತ್ತಾ ಇದ್ದೀರಿ ಅದು ತಪ್ಪು. ಹಾಗಾಗ ಬಾರದು. ಈ ಬಗ್ಗೆ ನಾನು ಹೇಳಿರುವಂಥ ಅಂಕಿಅಂಶ ತಪ್ಪು ಇರಬಹುದು. ಕೇಂದ್ರಸರ್ಕಾರ ಈ ಬಗ್ಗೆ ಕೊಡತಕ್ಕಂಥಾ ಸಹಾಯ ಧನ ಏನು ಇದೆ ಅದನ್ನು ಮರೆಮಾಚಿ ಅವರಿಗೆ ಗೊತ್ತಾಗದೇ ಇರುವ ರೀತಿಯಲ್ಲಿ ನೀವು ವ್ಯವಹಾರ ಮಾಡಿದರೆ ಅದು ತಪ್ಪು. ಕೇಂದ್ರ ಸರ್ಕಾರದವರು ಈ ಬಗ್ಗೆ ಏನು ಧನ ಸಹಾಯ ನೀಡುತ್ತಾರೆ, ಅವರು ಏನು ಒಳ್ಳೆಯ ಭಾವನೆಯಿಂದ ಕೊಡುತ್ತಿದ್ದಾರೆ ಅದು ಜನಗಳಿಗೆ ಗೊತ್ತಾಗುವ ರೀತಿಯಲ್ಲಿ ನೀವು ಕೆಲಸ ಮಾಡಿದರೆ ಕೇಂದ್ರ ಸರ್ಕಾರಕ್ಕೆ ನೀವು ಕೃತಜ್ಞತೆ ಸಲ್ಲಿಸಿದಂತಾಗುತ್ತದೆ. ಆರೀತಿ ಮಾಡಬೇಕೆಂದು ನಾನು ವ್ಯಕ್ತಪಡಿಸುತ್ತೇನೆ. ಇದರ ಜೊತೆಗೆ ಕೇಂದ್ರ ಸರ್ಕಾರದವರು ಗೊಬ್ಬರಕ್ಕೂ ಸಹ ಸಬ್ಸಿಡಿ ಕೊಡುತ್ತಾರೆ. ಅಲ್ಲದೆ ಇದರ ಜೊತೆಗೆ ಸೀಮೆಯೆಣ್ಣೆಗೆ,

ಗೊಬ್ಬರಕ್ಕೆ ಅಕ್ಕಿಗೆ ಇವಕ್ಕೆಲ್ಲಾ ಏಜು ಸಬ್ಸಿಡಿ ಕೊಡುತ್ತಿದ್ದಾರೆ, ಇವಕ್ಕೆಲ್ಲಾ ಅವರು ಏನು ಧನ ಸಹಾಯ ಕೊಡುತ್ತಾರೋ ಅದು ಸಾಮಾನ್ಯ ಜನಗಳಿಗೂ ಗೊತ್ತಾಗಬೇಕು ಎನ್ನುವ ದೃಷ್ಟಿಯಿಂದ ನಾನು ಈ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

ಜೊತೆಗೆ ನ್ಯಾಯಬೆಲೆ ಅಂಗಡಿಗಳಲ್ಲಿ ಇವರು ಕೊಡತಕ್ಕಂಥ ಅಕ್ಕಿ ಹೇಗಿರುತ್ತದೆ ಅಂದರೆ ಅದರಲ್ಲಿ ಕಲ್ಲು ಎಷ್ಟಿರುತ್ತದೆ, ಕಬ್ಬಿಣದ ಚೂರು ಎಷ್ಟಿರುತ್ತದೆ, ಧೂಳು ಎಷ್ಟಿರುತ್ತದೆ ಎನ್ನುವುದನ್ನು ನಾನು ಸ್ವಲ್ಪ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆ ಸಭೆಯಲ್ಲಿ ಒಂದು ಅಕ್ಕಿಯ ಸ್ಯಾಂಪಲ್ ಪೊಟ್ಟಣವನ್ನು ತಂದಿದ್ದೆ. ಅದರಲ್ಲಿ ದೊಡ್ಡ ದೊಡ್ಡ ಕಬ್ಬಿಣದ ಚೂರು ಗಳಿದ್ದುವು, ಕಲ್ಲುಗಳಿದ್ದುವು, ತೌಡಿನ ಮಿಶ್ರಣ ಮಾಡಿ ಕೊಟ್ಟಿರುವುದನ್ನು ಮಾನ್ಯ ಆಹಾರ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಬಡವರಿಗೆ ೨ ರೂಪಾಯಿಗೆ ಅಕ್ಕಿ ಕೊಡುವುದು ಒಳ್ಳೆಯ ಕಾರ್ಯಕ್ರಮ. ಆದರೆ ಬಡವರು ಅಂದರೆ ಮೃಗಗಳು, ಇವರು ಕೊಟ್ಟಿದ್ದೆಲ್ಲಾ ತಿನ್ನುತ್ತಾರೆ...

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೆ, ಇದಕ್ಕೆ ಹೇಳಿಬಿಡುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್.—ಹೊಸದಾಗಿ ಸದಸ್ಯರು ಪ್ರಾರಂಭ ಮಾಡಿದ್ದಾರೆ. ಈ ರೀತಿ ಮೇಲಿಂದಮೇಲೆ ಹೇಳುವುದರಿಂದ ತೊಂದರೆಯಾಗುತ್ತದೆ.

ಶ್ರೀ ಜಿ. ಬಸವಣ್ಣಪ್ಪ.—ಅವರು ಮಾತನಾಡಲಿ, ನಾನು ಕೊನೆಗೆ ಉತ್ತರ ಕೊಡುತ್ತೇನೆ. ಅವರು ಈಲ್ಡ್ ಆಗಿರುವುದರಿಂದ ಹೇಳಿಬಿಡುತ್ತೇನೆ. ಮೊನ್ನೆ ತಾನೆ ಮಾನ್ಯ ಸದಸ್ಯರು ಕಳಪೆ ದರ್ಜೆಯ ಅಕ್ಕಿಯನ್ನು ತಂದು ಕೊಟ್ಟರು, ಅದರಲ್ಲಿ ಕಬ್ಬಿಣದ ಚೂರುಗಳಿದ್ದುವು, ಅದನ್ನು ಎಲ್ಲಿಂದ ತಂದರೋ ಗೊತ್ತಿಲ್ಲ. ತಂದುಕೊಟ್ಟರು. ಅದರ ಬಗ್ಗೆ ನಮ್ಮ ಅಧಿಕಾರಿಗಳಿಂದ ಎನ್‌ಕ್ವೈರಿ ಮಾಡಿಸಿದ್ದೇನೆ. ಅದು ನಾವು ನ್ಯಾಯಬೆಲೆ ಅಂಗಡಿಯಲ್ಲಿ ಕೊಟ್ಟ ಅಕ್ಕಿ ಅಲ್ಲ. ೩-೪ ತಿಂಗಳಿಂದ ಅಕ್ಕಿ ವಿತರಣೆಯಲ್ಲಿ ಕಳಪೆ ಅಕ್ಕಿ ಬರ ತಕ್ಕ ಪರಿಸ್ಥಿತಿ ಉಂಟಾಗಿದೆ. ಇದಕ್ಕೆ ಕಾರಣವೇನೆಂದರೆ, ಕೇಂದ್ರಸರ್ಕಾರದ ಆಹಾರ ನೀತಿ ಏನಿದೆ ಯೆಂದರೆ ಪ್ರತಿಯೊಂದು ರಾಜ್ಯಕ್ಕೂ ಟಾರ್ಗೆಟ್ ಕೊಟ್ಟಿದ್ದಾರೆ, ನಮಗೆ ೨ ಲಕ್ಷ ಟನ್ ಟಾರ್ಗೆಟ್ ಕೊಟ್ಟಿ ದ್ದಾರೆ. ಅದು ಎಫ್. ಎ. ಕ್ಯೂಲ್‌ಗೆ ಹೋಗಬೇಕು. ಸ್ಟ್ಯಾಂಡರ್ಡ್ ಕಡಿಮೆ ಇದ್ದರೆ ಒಪ್ಪುವುದಿಲ್ಲ. ಎ ಕ್ಲಾಸ್ ಕ್ವಾಲಿಟಿ ಎಫ್.ಐ ಪೂಪಲಿಗೆ ಹೋಗುತ್ತದೆ. ಎಲ್ಲಾ ರಾಜ್ಯದವರೂ ಹೀಗೆ ಮಾಡುತ್ತಾರೆ. ಕಳೆದ ೨-೩ ವರ್ಷಗಳಿಂದ ಪಂಜಾಬ್ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಸರಿಯಾಗಿಲ್ಲದೇ ಇರುವುದರಿಂದ ಅಲ್ಲಿ ಪೂಲ್ ಮಾಡಿದ್ದ ಮಿಶ್ರಣದಿಂದ ಕೂಡಿರತಕ್ಕ ಅಕ್ಕಿಯನ್ನು ಕೇಂದ್ರಸರ್ಕಾರ ಆ ಸ್ಟಾಕನ್ನು ಕೂಡಲೇ ಡಿಸ್ಪೋಸ್ ಮಾಡಬೇಕು ಎಂದು ಮಾಡಿದ್ದರಿಂದ ಅದು ಹೆಚ್ಚಿಗೆ ಕರ್ನಾಟಕಕ್ಕೆ ಬರುತ್ತಿತ್ತು. ಅದರ ಬಗ್ಗೆ ಅನೇಕ ಸಾರಿ ಮೀಟಿಂಗ್ ಕರೆದಿದೆ. ಮಾನ್ಯ ಸದಸ್ಯರು ಗಾಂಧಿನಗರದಿಂದ ಬರುತ್ತಿದ್ದಾರೆ, ಅವರಿಗೆ ಗೊತ್ತಿದೆ. ನಾನು ಇದರ ಬಗ್ಗೆ ಕೇಂದ್ರದ ಫುಡ್ ಮಿನಿಸ್ಟರಿಗೆ ಹೇಳಿದ್ದೇನೆ ಸಂಬಂಧಪಟ್ಟ ಕಾರ್ಯದರ್ಶಿ ಯವರಿಗೆ ಹೇಳಿದೆ, ಮ್ಯಾನೇಜಿಂಗ್ ಡೈರೆಕ್ಟರಿಗೆ ಹೇಳಿದೆ, ರೀಜನಲ್ ಮ್ಯಾನೇಜರಿಗೆ ಹೇಳಿದೆ. ಜೋನಲ್ ಆಫೀಸರ್ಸ್ ಮೀಟಿಂಗ್ ಕರೆದು ಎಚ್ಚರಿಕೆ ಕೊಡಲಾಗಿದೆ. ೨-೩ ತಿಂಗಳಿಂದ ಇಂತಹ ಅಕ್ಕಿ ಬಂದದ್ದು ನಿಜ. ನಾವು ಓಪನ್ ಮಾರ್ಕೆಟ್‌ನಲ್ಲಿ ಏನು ಕೊಟ್ಟಿದ್ದೇವೆ ಅದು ಒಳ್ಳೆಯ ಅಕ್ಕಿ, ಯಾವ ಕಂಪ್ಲೈಂಟ್ಸ್ ಇಲ್ಲ. ಅಧಿಕಾರಿಗಳಿಗೆ ತಿಳಿಸಿದೆ ಮಾನ್ಯ ಸದಸ್ಯರು ಹೇಳಿರುವುದರ ಬಗ್ಗೆ ಕಳಕಳಿ ಇದೆ. ವಿತರಣಾ ವ್ಯವಸ್ಥೆಯಲ್ಲಿ ಎ ಕ್ವಾಲಿಟಿ ಉತ್ತಮದರ್ಜೆ ಅಕ್ಕಿಯನ್ನು ಕೊಡಬೇಕು ಎನ್ನುವುದು ನಮ್ಮ ಸರ್ಕಾರದ ಉದ್ದೇಶ. ಇದನ್ನು ೧೯೮೩ನೇ ಇಸವಿಯಿಂದ ನಡೆಸಿಕೊಂಡು ಬಂದಿದ್ದೇವೆ. ಕಳೆದ ೨-೩ ತಿಂಗಳಿಂದ ಈ ರೀತಿಯಾಗಿರುವುದನ್ನು ಒಪ್ಪಿಕೊಳ್ಳುತ್ತೇನೆ, ಅದನ್ನು ಸರಿಪಡಿಸುವುದಕ್ಕೆ ತಯಾರಿದ್ದೇನೆ.

ಛೇರ್ಮನ್.—ರತ್ನಾಕರ್‌ರವರೇ, ನೀವು ಪುನಃ ಈಲ್ಡ್ ಆಗಬೇಡಿ.

ಶ್ರೀ ಪಟಮಕ್ಕಿ ರತ್ನಾಕರ.—ಅವರು ನಮ್ಮ ಜಿಲ್ಲೆಯವರಾದ್ದರಿಂದ ಈಲ್ಡ್ ಆದೆ ಮಾನ್ಯ ಸಚಿವರು ತಮ್ಮ ಮಾತಿನಲ್ಲಿ ಒಂದು ವಿಷಯವನ್ನು ಹೇಳಿದರು. ಕಳಪೆ ಅಕ್ಕಿಯನ್ನು ಮಾನ್ಯ ಸದಸ್ಯರು ತಂದಿದ್ದಾರೆ. ಅದನ್ನು ಎಲ್ಲಿಂದ ತಂದರೋ ಗೊತ್ತಿಲ್ಲ ಎಂದು ಹೇಳಿದರು. ನಾನು ಖಂಡಿತವಾಗಿ ಹೇಳು ತ್ತೇನೆ. ನಮ್ಮ ತಾಲ್ಲೂಕಿನ ಒಂದು ನ್ಯಾಯಬೆಲೆ ಅಂಗಡಿಯಲ್ಲಿ ಮಾರಾಟ ಮಾಡಿರತಕ್ಕ ಕಳಪೆ ಅಕ್ಕಿ ಯನ್ನು ತಮ್ಮ ಗಮನಕ್ಕೆ ತಂದಿದ್ದೇನೆಯೇ ಹೊರತು ಯಾವುದೋ ಅಕ್ಕಿಯನ್ನು ತಂದು ಸಚಿವರಿಗೆ ಕೆಟ್ಟ ಹೆಸರು ತರಿಸಬೇಕು, ಆ ರೀತಿ ನಾಟಕ ಆಡಬೇಕು ಎಂಬ ಯಾವುದೇ ದೃಷ್ಟಿಕೋನದಿಂದ ಅಲ್ಲ. ನಮ್ಮ ತಾಲ್ಲೂಕಿನಲ್ಲಿ ನ್ಯಾಯಬೆಲೆ ಅಂಗಡಿಯಲ್ಲಿ ಮಾರಾಟವಾಗತಕ್ಕಂಥ ಕಳಪೆ ಅಕ್ಕಿಯನ್ನು ಸಚಿವರ

ಗಮನಕ್ಕೆ ತರಬೇಕು ಎಂಬ ಉದ್ದೇಶದಿಂದ ತಂದು ತೋರಿಸಿದ್ದೇನೆ. ಬಡವರು ಅಂದತಕ್ಷಣ ಕೊಟ್ಟಿದ್ದೆಲ್ಲಾ ತಿನ್ನುತ್ತಾರೆ, ತೌಡನ್ನು ತಿನ್ನುತ್ತಾರೆ, ಕಲ್ಲನ್ನು ತಿನ್ನುತ್ತಾರೆ ಎಂದು ಅರ್ಥವಲ್ಲ. ಬಡವರಿಗೆ ಮಾನ ಮರ್ಯಾದೆ ಇರುತ್ತದೆ, ಅವರಿಗೂ ಒಳ್ಳೆಯ ಭಾವನೆಗಳು ಇರುತ್ತವೆ, ಆ ಭಾವನೆಗಳಿಗೆ ಧಕ್ಕೆ ಬಾರದ ರೀತಿಯಲ್ಲಿ ಸರ್ಕಾರದವರು ಒಳ್ಳೆಯ ಅಕ್ಕಿಯನ್ನು ಕೊಡಬೇಕು ಎಂಬ ದೃಷ್ಟಿಯಿಂದ ನಾನು ಹೇಳಿದ್ದು. ಆಮೇಲೆ ಬೆಳಿಗ್ಗೆ ಎದ್ದರೆ ಕೂಲಿ ಮಾಡತಕ್ಕವರು ಏನಿದ್ದಾರೆ, ಅವರ ಆರೋಗ್ಯ ಚೆನ್ನಾಗಿರಬೇಕಾಗುತ್ತದೆ ಎಂಬ ದೃಷ್ಟಿಯಿಂದ ಹೇಳಿದ್ದು. ನಾವು ಒಳ್ಳೆಯ ಅಕ್ಕಿಯನ್ನು ಕೊಡುತ್ತೇವೆ ಎಂದು ಹೇಳಿದರು. ನಿಜಕ್ಕೂ ಕೊಡುತ್ತಾ ಇರಬಹುದು. ಆದರೆ ಕೆ. ಎಫ್. ಸಿ. ಅಥವಾ ಒಂದು ತಾಲ್ಲೂಕಿನ ಬ್ರಾಂಚ್‌ನ ಶಾಖೆ ಇರಬಹುದು ಅಥವಾ ಜಿಲ್ಲಾ ಶಾಖೆ ಇರಬಹುದು, ಅಲ್ಲಿ ಸಂಗ್ರಹಣೆ ಮಾಡತಕ್ಕ ಜಾಗದಿಂದ ಒಳ್ಳೆಯ ಅಕ್ಕಿ ಬೇರೆ ಕಡೆ ಹೋಗಿ ಅತ್ಯಂತ ಕಳಪೆ ಅಕ್ಕಿ ಅಲ್ಲಿ ಸಂಗ್ರಹಣೆಯಾಗಿ ಅಲ್ಲಿಂದ ಅದು ವಿತರಣೆಯಾಗತಕ್ಕ ಪರಿಸ್ಥಿತಿ ಇದೆ. ಒಂದುವೇಳೆ ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾದವರು ಒಳ್ಳೆಯ ಅಕ್ಕಿಯನ್ನು ಕೊಟ್ಟಿರಬಹುದು ಅಥವಾ ಕರ್ನಾಟಕ ಫುಡ್ ಕಾರ್ಪೋರೇಷನ್ನಿನವರು ಒಳ್ಳೆಯ ಅಕ್ಕಿಯನ್ನು ಸರಬರಾಜು ಮಾಡಿರಬಹುದು. ಆದರೆ ತಾಲ್ಲೂಕುಮಟ್ಟದಲ್ಲಿರತಕ್ಕಂಥ, ಜಿಲ್ಲಾ ಮಟ್ಟದಲ್ಲಿರತಕ್ಕಂಥ ಅಧಿಕಾರಿಗಳು ಶಾಮೀಲಾಗಿ, ಹೆಗ್ಗಣಗಳಾಗಿ ಒಳ್ಳೆಯ ಅಕ್ಕಿಯನ್ನು ಮಾರಿ ಕಡಿಮೆ ದರ್ಜೆ, ಕಳಪೆಯ ಅಕ್ಕಿಯನ್ನು ತಂದುಕೊಟ್ಟು ಮಾರತಕ್ಕ ಪರಿಸ್ಥಿತಿ ಇದೆ. ಈ ರೀತಿಯ ಕಾರ್ಯಚಟುವಟಿಕೆಗಳು ಸಂಗ್ರಹಣಾಲಯದಲ್ಲಿ ಅಧಿಕಾರಿಗಳ ಕುಮ್ಮಕ್ಕಿನಿಂದ, ಅಧಿಕಾರಿಗಳ ದುರಾಸೆಯಿಂದ ಆಗಿರುವುದನ್ನು ಮಾನ್ಯ ಸಚಿವರ ಗಮನಕ್ಕೆ ತರಲಿಕ್ಕೆ ಪ್ರಯತ್ನ ಪಟ್ಟಿದ್ದೇನೆ. ಈಗ ನ್ಯಾಯಬೆಲೆ ಅಂಗಡಿಗೆ ತಾಲ್ಲೂಕಿನ ಶಾಖೆಯಿಂದ ಅಲಾಟ್‌ಮೆಂಟ್ ಆಗುತ್ತದೆ. ೨೦ ಚೀಲ ಅಕ್ಕಿ, ೧೦ ಚೀಲ ಗೋಧಿ ತೆಗೆದುಕೊಂಡು ಹೋಗಬೇಕಾಗಿರುತ್ತದೆ. ನ್ಯಾಯಬೆಲೆ ಅಂಗಡಿಯವರಿಗೆ ಅದನ್ನು ಪೂರ್ತಿಯಾಗಿ ಖರೀದಿ ಮಾಡತಕ್ಕ ಆರ್ಥಿಕ ಶಕ್ತಿ ಇಲ್ಲದೇ ಇರುವುದರಿಂದ ಅರ್ಧ ಹಣ ಕಟ್ಟಿ ಅರ್ಧ ವಸ್ತುಗಳನ್ನು ಮಾತ್ರ ತೆಗೆದುಕೊಂಡು ಹೋಗುತ್ತಾರೆ. ಹೀಗೆ ಅರ್ಧ ಹಣ ಕಟ್ಟಿ ಅರ್ಧ ವಸ್ತುಗಳನ್ನು ತೆಗೆದುಕೊಂಡು ಮಾರುತ್ತಾ ಇರಬೇಕಾದರೆ ತಿಂಗಳ ಕೊನೆಗೆ ಬಂದಿರುತ್ತದೆ. ಉಳಿದ ಅರ್ಧ ಹಣ ಕೊಟ್ಟು ಅರ್ಧ ವಸ್ತುಗಳನ್ನು ತೆಗೆದುಕೊಂಡು ಹೋಗಲಿಕ್ಕೆ ಬಂದಾಗ, ಅಲ್ಲಿನವರು ನೆಕಸ್ಟ್ ಮಂತ್ ಅಲಾಟ್‌ಮೆಂಟ್ ಹಾಕಿದ್ದೇವೆ, ಅದು ಬಂದುಬಿಡುತ್ತದೆ, ನೆಕ್ಸ್ಟ್ ಮಂತ್ ಅಲಾಟ್‌ಮೆಂಟ್‌ನಲ್ಲಿ ತೆಗೆದುಕೊಂಡು ಹೋಗಿ ಎಂದು ಹೇಳಿ ಅಧಿಕಾರಿ, ಮ್ಯಾನೇಜರ್ ಶಾಮೀಲಾಗಿ ಒಂದು ಅಂಗಡಿಗೆ ೨ ಚೀಲದಂತೆ ಉಳಿಸಿದರೆ ೩ ಲಾರಿ ಆಗುತ್ತದೆ, ೩ ಲಾರಿ ಅಕ್ಕಿ ಮುಂತಾದ ಆಹಾರಧಾನ್ಯಗಳನ್ನು ಸಂಗ್ರಹಣೆ ಮಾಡಿ ಅದನ್ನು ಕಾಳಸಂತೆಯಲ್ಲಿ ಮಾರಾಟ ಮಾಡತಕ್ಕ ಕೇಂದ್ರಗಳಾಗಿ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿವೆ. ಇದು ನಿಜಕ್ಕೂ ನಡೆದಿರತಕ್ಕದ್ದು. ಇದು ಮಾನ್ಯ ಸಚಿವರ ಗಮನಕ್ಕೂ ಬಂದಿರಬಹುದು. ನಮ್ಮ ತಾಲ್ಲೂಕಿನಲ್ಲಿ, ಪಕ್ಕದ ತಾಲ್ಲೂಕಿನಲ್ಲಿ ನಡೆದಿರತಕ್ಕ ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಮತ್ತು ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ ಪ್ರತಿ ತಿಂಗಳೂ ಏನಾಗಿದೆ, ಏನು ಮಾಡಿದ್ದಾರೆ ಎನ್ನುವುದನ್ನು ಹೇಳುತ್ತೇನೆ. ತಹಶೀಲ್ದಾರರನ್ನು ಮುಖ್ಯಾಧಿಕಾರಿಯನ್ನಾಗಿ ಮಾಡಿದ್ದಾರೆ. ಅವರ ಕೈಕೆಳಗೆ ಫುಡ್ ಶಿರಸ್ತೇದಾರ್ ಇದ್ದಾರೆ, ಬೇರೆ ಕ್ಲರ್ಕ್ಸ್ ಇರುತ್ತಾರೆ. ತಹಶೀಲ್ದಾರರಿಗೆ ಬೇರೆ ಬೇರೆ, ರೆವಿನ್ಯೂ ಮ್ಯಾಟರ್ಸ್, ತಾಳಿಭಾಗ್ಯ ಮುಂತಾದ ಬೇರೆ ಬೇರೆ ಯೋಜನೆಗಳೇನಿವೆ ಆ ಎಲ್ಲಾ ಯೋಜನೆಗಳ ಬಗ್ಗೆ ಅವರು ತಲೆಕೆಡಿಸಿಕೊಂಡಿರುತ್ತಾರೆ. ಆಹಾರ ಇಲಾಖೆಯ ವಿಚಾರಗಳ ಬಗ್ಗೆ ಖಂಡಿತವಾಗಿ ಅವರು ತಲೆಕೆಡಿಸಿಕೊಳ್ಳುವುದಿಲ್ಲ. ಇವರು ಕೊಟ್ಟಿರತಕ್ಕ ಚೀಪ್ ಡೀಸಲ್, ಪೆಟ್ರೋಲನ್ನು ಬೇರೆ ಕಾರ್ಯಗಳಿಗೆ ಉಪಯೋಗಿಸಿಕೊಳ್ಳುತ್ತಾರೆ. ನ್ಯಾಯಬೆಲೆ ಅಂಗಡಿಗಳಲ್ಲಿ ಯಾವುದಾದರೂ ದೂರು ಬಂದರೆ ಮಾತ್ರ ಗಮನಹರಿಸಿ ಸ್ಟಾಕ್ ವೆರಿಫಿಕೇಷನ್ ಮಾಡಬೇಕು. ನ್ಯಾಯಬೆಲೆ ಅಂಗಡಿಗಳಲ್ಲಿ ಒಂದು ತಿಂಗಳ ಕೋಟಾವನ್ನು ಸಂಪೂರ್ಣವಾಗಿ ಹಣ ಕೊಟ್ಟು ಪಡೆದಿದ್ದಾರೆಯೋ? ಅದನ್ನು ಜನಗಳಿಗೆ ತಲುಪಿಸುತ್ತಿದ್ದಾರೆಯೋ? ಎಂಬುದನ್ನು ಅವರು ನೋಡಬೇಕು. ಮತ್ತು ಸ್ಟಾಕ್‌ನ್ನು ತನಿಖೆ ಮಾಡತಕ್ಕಂಥ ಕೆಲಸವನ್ನು ಅವರು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುತ್ತಾ ಇಲ್ಲ, ಏಕೆಂದರೆ, ಅವರಿಗೆ ಇರತಕ್ಕ ಕಾರ್ಯಗಳ ಒತ್ತಡದಿಂದ ಈ ಕೆಲಸ ಮಾಡುತ್ತಾ ಇಲ್ಲ. ಹೀಗಾಗಿ ಇಬ್ಬರು ಅಧಿಕಾರಿಗಳು ಶಾಮೀಲಾಗಿ ಸಹಸ್ರಾರು ರೂಪಾಯಿಗಳ ಆಹಾರಧಾನ್ಯಗಳನ್ನು ಕಾಳಸಂತೆಯಲ್ಲಿ ಮಾರಾಟಮಾಡತಕ್ಕ ಸಂದರ್ಭ ಇದೆ. ಇದು ತಮ್ಮ ಗಮನಕ್ಕೆ ಬಂದಿರಬಹುದು. ಇದನ್ನು ನಾನು ಈ ಸಭೆಯಲ್ಲಿ ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನ್ಯಾಯಬೆಲೆ ಅಂಗಡಿಯನ್ನು ಪಡೆಯಲಿಕ್ಕೆ ರಾಜಕೀಯ ಪ್ರಭಾವ, ಒತ್ತಡ ಇರುತ್ತದೆ.

ಅಲ್ಲದೆ ಸಮರ್ಪಕವಾಗಿ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗುವುದಕ್ಕಾಗಿ ಸಂಬಂಧಪಟ್ಟ ಅಧಿಕಾರಿಯ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡರೆ ರಾಜಕೀಯ ಪ್ರಭಾವಗಳು ನಡೆಯುತ್ತಕ್ಕದ್ದನ್ನು ನಾನು ನೋಡಿದ್ದೇನೆ. ಇಂತಹ ವಿಚಾರಗಳು ಮಾನ್ಯ ಸಚಿವರ ಗಮನಕ್ಕೆ ಬಂದಿರಬಹುದು ಎಂದು ನನ್ನ ಭಾವನೆ. ಅಕ್ಕಿ ಕೇಳಿದರೆ, ಸಕ್ಕರೆ ಕೇಳಿದರೆ ಗೋಧಿ ತೆಗೆದುಕೊಂಡು ಹೋಗಿ ಎಂದು ಹೇಳುತ್ತಾರೆ.

ಬಿಜಾಪುರ, ಧಾರವಾಡ, ಗುಲ್ಬರ್ಗಾದವರು ಅಕ್ಕಿ ಜೋಳ ಕೊಡಿ ಎಂದರೆ, ರಾಗಿ ತೆಗೆದುಕೊಂಡು ಹೋಗಿ, ರವೆ ತೆಗೆದುಕೊಂಡು ಹೋಗಿ ಎಂದು ಹೇಳುತ್ತಾರೆ. ಆಹಾರದ ವಿಶಿಷ್ಟ ಪದ್ಧತಿ ಇರತಕ್ಕಂತಹ ಜನರ ರೀತಿ ನೀತಿಗಳಿಗೆ, ಅವರ ಇಚ್ಛೆಗಳಿಗನುಗುಣವಾಗಿ ಆಹಾರ ಧಾನ್ಯಗಳನ್ನು ಕೊಡತಕ್ಕಂತಹ ವ್ಯವಸ್ಥೆಯಾಗಬೇಕು. ನಮ್ಮ ಮಲೆನಾಡು ಪ್ರದೇಶದಲ್ಲಿ ಗೋಧಿ ತೆಗೆದುಕೊಳ್ಳುವವರು ಬಹಳ ಕಡಿಮೆ ಜನರಿದ್ದಾರೆ. ಅಂತಹವರಿಗೆ ಗೋಧಿ ತೆಗೆದುಕೊಂಡು ಹೋಗಲೇ ಬೇಕೆಂದು ಒತ್ತಡ ಇದೆ. ಗೋಧಿ ತೆಗೆದುಕೊಂಡರೆ ಸಕ್ಕರೆ ಕೊಡುತ್ತೇವೆಂದು ಹೇಳುತ್ತಾರೆ. ಕೂಲಿ ಮಾಡತಕ್ಕಂತಹವರಿಗೆ ಹಾಗೂ ಸಾಮಾನ್ಯ ಜನರಿಗೆ ಈ ರೀತಿಯ ಒತ್ತಡ ಮಾಡಿದರೆ ಹೇಗೆ ? ಅವರು ತಮಗೆ ಬೇಕಾಗಿರತಕ್ಕಂತಹ ಆಹಾರಧಾನ್ಯಗಳನ್ನು ಮುಕ್ತವಾಗಿ ಖರೀದಿ ಮಾಡುವುದಕ್ಕೆ ಖಂಡಿತವಾಗಿ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ೧೯೭೭ನೇ ಅಕ್ಟೋಬರ್‌ನಲ್ಲಿ ೧೯೭೮ರ ಜನವರಿಯಿಂದ ಖಾಸಗೀ ನ್ಯಾಯಬೆಲೆ ಅಂಗಡಿಗಳು ರದ್ದಾಗುತ್ತವೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಎಲ್ಲಾ ಖಾಸಗೀ ನ್ಯಾಯಬೆಲೆ ಅಂಗಡಿಗಳನ್ನು ರದ್ದು ಮಾಡಿದ್ದೇವೆಂದು ದೊಡ್ಡ ಪ್ರಚಾರದ ಮುಖಾಂತರವಾಗಿ ಘೋಷಣೆ ಮಾಡಿದ್ದರು. ಕರ್ನಾಟಕ ರಾಜ್ಯದ ಎಲ್ಲಾ ಕಡೆಗಳಲ್ಲಿ ಹಾಡಿ ಹೊಗಳಿ ಹರಸಿದರು, ಎಲ್ಲಾ ಕಡೆ ಪ್ರಶಂಸೆಯ ಸುರಿಮಳೆ ಈ ಘೋಷಣೆಗೆ ಸಿಕ್ಕಿತು. ಆ ಮೇಲೆ ಸಂಬಂಧಪಟ್ಟವರು ಕೋರ್ಟಿಗೆ ಹೋದರೆಂದು ಕಾಣುತ್ತದೆ. ರದ್ದು ಮಾಡಿರತಕ್ಕಂತಹ ನ್ಯಾಯ ಬೆಲೆ ಅಂಗಡಿಯ ಉದ್ಯೋಗಿಗಳಿಗೆ ಬದಲೀ ಉದ್ಯೋಗ ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಘೋಷಣೆಯನ್ನು ಮಾಡಿದರು. ಅದು ಕಾರ್ಯಗತವಾಯಿತೇ ? ಅದು ಎಷ್ಟು ಕಾರ್ಯಗತವಾಗಿದೆ. ? ಇದು ಕಾರ್ಯಗತವಾಗುವುದಕ್ಕೆ ಏಕೆ ಸಾಧ್ಯವಾಗಲಿಲ್ಲ. ಮಾನ್ಯ ಮಂತ್ರಿಗಳೂ ಕೂಡ ಅದನ್ನು ರದ್ದು ಮಾಡುತ್ತೇವೆಂದು ಹಠ ಹಿಡಿದರೂ ಕೂಡ ಇದು ಏಕೆ ಸಾಧ್ಯವಾಗಲಿಲ್ಲ ? ನ್ಯಾಯ ಬೆಲೆ ಅಂಗಡಿಯವರು ಆವತ್ತು ಪ್ರಶ್ನೆ ಮಾಡಿದರು ನೀವು ಹೇಗೆ ರದ್ದು ಮಾಡುತ್ತೀರೋ, ನಾವೂ ನೋಡುತ್ತೇವೆ ಎಂದು. ಈ ಮಧ್ಯೆ ಆಹಾರ ಮಂತ್ರಿಯವರಿಗೂ ನ್ಯಾಯ ಬೆಲೆ ಅಂಗಡಿಯವರಿಗೂ ಪೈಪೋಟಿ, ತಿಕ್ಕಾಟ, ಗುದ್ದಾಟ ನಡೆಯಿತು. ಈ ಕುಸ್ತಿಯಲ್ಲಿ ಒಬ್ಬ ಶಾಸಕರು ಅಂಪೈರ್ ಆಗಿ ಕೆಲಸವನ್ನು ಚೆನ್ನಾಗಿ ಮಾಡಿದರು. ಅವರು ಮಾನ್ಯ ಮಂತ್ರಿಗಳ ಮಿತ್ರರು ಹಾಗೂ ಅವರ ಪಕ್ಷಕ್ಕೆ ಸಂಬಂಧಪಟ್ಟಿರತಕ್ಕಂತಹವರು. ರದ್ದು ಮಾಡಬೇಕೆಂಬ ಇಚ್ಛೆ ಇರಬಹುದು. ಸಚಿವರಿಗೂ ನ್ಯಾಯ ಬೆಲೆ ಅಂಗಡಿಯವರಿಗೂ ಜಂಗಲೀ ಕುಸ್ತಿ ಮಧ್ಯೆ ಅಂಪೈರ್ ಆಗಿ ಒಬ್ಬ ಶಾಸಕರು ಕೆಲಸ ಮಾಡಿದರು. ಆಮೇಲೆ ನ್ಯಾಯ ಬೆಲೆ ಅಂಗಡಿಯವರಿಗೆ ಒಂದು ವರ್ಷ ಜೀವದಾನ ಮಾಡಬೇಕೆಂದು ಸಚಿವ ಸಂಪುಟ ನಿರ್ಧಾರ ತೆಗೆದುಕೊಂಡಿತು. ಅದು ಎರಡು ವರ್ಷವಾಯಿತು.

ಶ್ರೀ ಆರ್. ಎನ್. ನಾಯಕ್.—ಅವರು ಒಂದು ವರ್ಷ ಜೀವದಾನ ಮಾಡಿದ್ದಾರೆ. ಸದ್ಯ ೨೦೦೦ ದ ವರ್ಷದವರೆಗೂ ಮಾಡಿಲ್ಲವಲ್ಲ, ಅದಕ್ಕೆ ಸಂತೋಷ ಪಟ್ಟು ಕೊಳ್ಳಬೇಕು.

ಶ್ರೀ ಪಟವರ್ಧನ ರತ್ನಾಕರ.—೧೯೭೮ನೇ ಆಗಸ್ಟ್ ೮ನೇ ತಾರೀಖು ನಮ್ಮ ಘನ ಸರ್ಕಾರದ ಸಚಿವ ಸಂಪುಟ ಅವರಿಗೆ ಒಂದು ತಿಂಗಳು ಜೀವದಾನ ಕೊಟ್ಟರು. ಅದು ಒಂದು ವರ್ಷವಾಯಿತು, ಎರಡು ವರ್ಷವಾಯಿತು ಮತ್ತು ಇವತ್ತಿಗೂ ಕೂಡ ಹಾಗೇ ಇದೆ. ಈ ನ್ಯಾಯ ಬೆಲೆ ಅಂಗಡಿಯವರಿಗೂ, ಆಹಾರ ಸಚಿವರಿಗೂ, ಮತ್ತು ಸರ್ಕಾರಕ್ಕೂ ಮಧ್ಯೆ ಹಾಗೆಯೇ ನಿಂತಿದೆ. ಇದು ಒಬ್ಬ ಶಾಸಕರ ಪ್ರಭಾವದಿಂದ ನಿಂತಿದೆ, ಇದು ಅತ್ಯಂತ ಗಂಭೀರವಾಗಿರತಕ್ಕಂತಹ ವಿಚಾರವಾದ್ದರಿಂದ, ಇದನ್ನು ಪರಿಶೀಲಿಸಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಬಸವಣ್ಣೆಪ್ಪ.—ಇದು ಬಹಳ ಮುಖ್ಯವಾದ ವಿಷಯ. ಇದು ಬಹಳ ದೊಡ್ಡ ಅಲಿಗೇಷನ್. ಅದಕ್ಕೋಸ್ಕರ ನಾನು ಇದರ ಬಗ್ಗೆ ಕ್ಲಾರಿಫಿಕೇಶನ್ ಕೊಡುವುದಕ್ಕೆ ಇಷ್ಟಪಡುತ್ತೇನೆ. ತಮಗೆ ತಿಳಿದ ಹಾಗೆ ೧೯೭೭ರಲ್ಲಿ ಜನತಾ ಸರ್ಕಾರವು ಅಧಿಕಾರಕ್ಕೆ ಬಂದಾಗ ನಾವು ಆಹಾರ ಧಾನ್ಯಗಳನ್ನು ನ್ಯಾಯ ಬೆಲೆ ಅಂಗಡಿಗಳ ವಿತರಣೆ ಮಾಡತಕ್ಕಂಥದ್ದು ನಡೆದು ಬಂದಿತ್ತು. ಅದು ತಮಗೆಲ್ಲಾ ತಿಳಿದಿದೆ.

ಹೋಲ್‌-ಸೇಲ್ ಪಾಯಿಂಟ್‌ಗೆ ನ್ಯಾಯ ಬೆಲೆ ಅಂಗಡಿಗಳು ಹೋಗುತ್ತಿರಲಿಲ್ಲ. ನ್ಯಾಯ ಬೆಲೆ ಅಂಗಡಿಗಳವರೂ ಮತ್ತು ಹೋಲ್ ಸೇಲ್ ಪಾಯಿಂಟ್‌ನಲ್ಲಿರತಕ್ಕವರು ಸೇರಿಕೊಂಡು ಏನೇನೋ ವ್ಯವಹಾರಗಳನ್ನು ಮಾಡುತ್ತಿದ್ದರು. ೨-೩ ಸಲ ಖಾಸಗೀ ನ್ಯಾಯ ಬೆಲೆ ಅಂಗಡಿಗಳ ಸಭೆಯನ್ನು ಕರೆದು ಈ ರೀತಿ ಮಾಡುವುದಾದರೆ ನಿಮ್ಮ ಲೈಸನ್ಸ್ ರದ್ದು ಮಾಡಬೇಕಾಗುತ್ತದೆ, ಇದನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ಕೊಡಲಾಯಿತು. ಆಮೇಲೆ ಎಷ್ಟು ಹೇಳಿದರೂ ಕೂಡ ಅವರ ಚಟುವಟಿಕೆ ನಿಲ್ಲಲಿಲ್ಲ. ಕೊನೆಗೆ ಒಂದು ದಿವಸ ಮೊದಲೇ ಹೇಳಿದ ಹಾಗೆ ೧೯೮೧ನೇ ಇಸವಿಯಲ್ಲಿ ಖಾಸಗೀ ನ್ಯಾಯ ಬೆಲೆ ಅಂಗಡಿಗಳನ್ನು ರದ್ದು ಮಾಡಬೇಕೆಂಬ ನಿರ್ಣಯವನ್ನು ಸಚಿವ ಸಂಪುಟ ತೆಗೆದುಕೊಂಡಿತು. ನ್ಯಾಯ ಬೆಲೆ ಅಂಗಡಿಯವರೇ ಆಗಲಿ, ಸರ್ಕಾರವೇ ಆಗಲೀ ಅಥವಾ ಇನ್ಯಾರೇ ಆಗಲೀ, ಅವರು ಬಳಕೆದಾರನ ಶೋಷಣೆ ಮಾಡತಕ್ಕಂತಹ ಪ್ರವೃತ್ತಿ ಉಂಟಾಗ ಬಾರದೆಂಬ ಮೂಲ ಉದ್ದೇಶದಿಂದ ಸರ್ಕಾರದವರು ಈ ಕ್ರಮವನ್ನು ಮತ್ತು ಈ ನಿಲುವನ್ನು ತೆಗೆದು ಕೊಂಡಿತು. ಕರ್ನಾಟಕ ರಾಜ್ಯದಾದ್ಯಂತ ಕೆಲವರು ಇದನ್ನು ಸ್ವಾಗತ ಮಾಡಿದರು, ಇನ್ನು ಕೆಲವರು ಅನೇಕ ವರ್ಷಗಳಿಂದ ಇದರಿಂದಲೇ ಜೀವನ ನಡೆಸತಕ್ಕಂತಹ ಖಾಸಗೀ ಅಂಗಡಿಗಳನ್ನು ರದ್ದು ಮಾಡಿ ಅವರನ್ನು ಬೀದಿ ಪಾಲು ಮಾಡಿದಿರಿ ಎಂದು ಹೇಳಿದರು. ಬೆಂಗಳೂರು ಸಿಟಿಗೆ ಸೀಮಿತವಾದಂತೆ ಪುನರ್ ವ್ಯವಸ್ಥೆಯನ್ನು ಮಾಡಿದ್ದೆವು. ಫುಡ್ ಕಾರ್ಪೊರೇಷನ್ ಹಾಗೂ ಸಹಕಾರಿ ಸಂಸ್ಥೆಗಳು ಬದಲೀ ವ್ಯವಸ್ಥೆಗೆ ಎಲ್ಲಾ ಸಿದ್ಧತೆಯನ್ನು ಮಾಡಿಕೊಂಡಿದ್ದವು. ಫುಡ್ ಕಾರ್ಪೊರೇಷನ್ ವತಿಯಿಂದ ಅಂಗಡಿ ಗಳನ್ನು ತೆರೆದು ವ್ಯವಸ್ಥೆ ಮಾಡಿದ್ದೆವು. ಕೋ ಆಪರೇಟಿವ್ ಸಂಸ್ಥೆಗಳನ್ನು ಅಪ್ರೋಚ್ ಮಾಡಿ ಬ್ರಾಂಚುಗಳನ್ನು ತೆರೆಯಲು ತಕ್ಕ ಬಂದೋಬಸ್ತು ಮಾಡಿದ್ದೆವು. ಆಗ ಅವರು ಉಚ್ಚ ನ್ಯಾಯಾಲಯಕ್ಕೆ ಹೋಗಿ ಸ್ಟೇ ಆರ್ಡರ್ ತಂದ ಮೇಲೆ, ಅದನ್ನು ವಿಸ್ತರಿಸಲೇಬೇಕಾಯಿತು. ಈ ಮನೆಯ ಆ ಪಕ್ಷದ ಶಾಸಕರು ಮತ್ತು ಈ ಪಕ್ಷದ ಶಾಸಕರು ಸೇರಿ ಸಾಮೂಹಿಕವಾಗಿ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಬಂದು ಖಾಸಗೀ ನ್ಯಾಯ ಬೆಲೆ ಅಂಗಡಿಗಳನ್ನು ರದ್ದು ಮಾಡಿದ್ದು ಸರಿಯಲ್ಲ, ಯಾರು ಇದರಲ್ಲಿ ಅವ್ಯವಹಾರ ಮಾಡುತ್ತಾರೆ, ಅಂತಹವರ ಲೈಸನ್ಸನ್ನು ರದ್ದು ಮಾಡುವುದಕ್ಕೆ ಅಗತ್ಯ ವಸ್ತುಗಳ ಕಾನೂನು ಪ್ರಕಾರ ಅವಕಾಶವಿದೆ ಎಂದು ಹೇಳಿದರು, ಆ ರೀತಿ ಮಾಡಿ, ಎಲ್ಲರ ಹೊಟ್ಟೆ ಮೇಲೆ ಕಲ್ಲು ಹಾಕಬೇಡಿ ಎಂದು ಶಾಸಕ ಮಿತ್ರರೂ, ಸಾರ್ವಜನಿಕರು, ಮಹಿಳಾ ಸಂಸ್ಥೆಗಳು ವಿನಂತಿಸಿಕೊಂಡರು. ಅಲ್ಲದೆ ನಿರುದ್ಯೋಗಿ ಪದವೀಧರರು ಇದನ್ನು ನಡೆಸುತ್ತಿದ್ದರು ಅವರೆಲ್ಲಾ ನಾವು ಬೀದಿ ಪಾಲಾಗುತ್ತೇವೆ ಎಂದು ವಿನಂತಿಸಿದರು. ಯಾವ ಕೆಲವು ಹೆಣ್ಣು ಮಕ್ಕಳು ಸಹ ಇದನ್ನು ನಡೆಸುತ್ತಾ ಬಂದಿದ್ದರು, ಅವರು ಕೂಡ ಬಂದು ವಿನಂತಿಸಿಕೊಂಡರು. ಆದುದರಿಂದ ಇದನ್ನು ವಿಸ್ತರಿಸಬೇಕಾಯಿತು. ಅಷ್ಟೇ ವಿನಹ ಇದರಲ್ಲಿ ಯಾರ ಕೈವಾಡವಿಲ್ಲ. ಯಾರೂ ಇದರ ಬಗ್ಗೆ ಏನೂ ಮಾಡಲಿಲ್ಲ. ನಮ್ಮ ಪಕ್ಷದ ಒಬ್ಬ ಶಾಸಕರು ಹೇಳಿದ್ದಕ್ಕೆ ಮರಳಾಗಿ ಮಾಡಿದ್ದಲ್ಲ. ಬಳಕೆದಾರರ ಹಿತವನ್ನು ಕಾಪಾಡುವುದ ಕ್ಕೋಸ್ಕರ ಸರ್ಕಾರ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಿದೆ. ಈ ಮಧ್ಯೆ ಎಚ್ಚರಿಕೆಯನ್ನು ಕೊಟ್ಟ ಮೇಲೆ ಖಾಸಗೀ ನ್ಯಾಯ ಬೆಲೆ ಅಂಗಡಿಯವರೂ ಸಹ ಬಳಕೆದಾರರಿಗೆ ಸರಿಯಾಗಿ ವಿತರಣೆ ಮಾಡುತ್ತಿದ್ದಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಮಂತ್ರಿಗಳು ಪದೇ ಪದೇ ಇಂಟರ್‌ಫಿಯರ್ ಆದರೆ ಹೇಗೆ ? ಉತ್ತರ ಹೇಳುವಾಗ ಪ್ರಸ್ತಾಪ ಮಾಡಲಿ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—೧೯೮೧ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ನ್ಯಾಯ ಬೆಲೆ ಅಂಗಡಿಗಳನ್ನು ರದ್ದು ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದಾರೆಂದು ಮಾನ್ಯ ರತ್ನಾಕರ್‌ರವರು ಹೇಳಿದ್ದಾರೆ. ಅದಕ್ಕೆ ತಾವು ಉತ್ತರ ಕೊಟ್ಟಿದ್ದೀರಿ. ಹೀಗಾದರೆ, ನನ್ನ ಅಭಿಪ್ರಾಯಗಳನ್ನು ಹೇಳ ಬೇಕಾಗುತ್ತದೆ. ಆದುದರಿಂದ ತಾವು ಮಧ್ಯದಲ್ಲಿ ಉತ್ತರ ಹೇಳುವುದು ಬೇಡ. ಕ್ಲಾರಿಫಿಕೇಷನ್‌ನಲ್ಲಿ ಉಪ ಪ್ರಶ್ನೆಗಳನ್ನು ಕೇಳುತ್ತೇವೆ. ಆಗ ಉತ್ತರ ಕೊಡಿ,

ಶ್ರೀ ಪಟವಂಕ್ಕಿ ರತ್ನಾಕರ್.—ಮಾನ್ಯ ಸಚಿವರು ಚರ್ಚೆಯ ಮಧ್ಯದಲ್ಲಿ ಭಾಗವಹಿಸುತ್ತಾ ಕೆಲವು ವಿಚಾರಗಳನ್ನು ಹೇಳಿದರು. ನಾನು ಏಕೆ ಇದನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದೆನೆಂದರೆ, ಆಗಿನ ರಾಜ್ಯ ಸರ್ಕಾರದ ಮುಖ್ಯ ಮಂತ್ರಿಗಳು ನಾವೇನು ನ್ಯಾಯ ಬೆಲೆ ಅಂಗಡಿಗಳನ್ನು ರದ್ದು ಮಾಡುತ್ತೇ ವೆಂದು ಘಂಟಾಘೋಷವಾಗಿ ಕರ್ನಾಟಕದ ಜನತೆಗೆ ತಿಳಿಸಿದರೋ, ಆ ಘೋಷಣೆಗೆ ಆಹಾರ ಸಚಿವರೂ ಕೂಡ ಬದ್ಧರಾಗಿದ್ದೇವೆಂದು ಹೇಳಿದರು ಅಥವಾ ಪರೋಕ್ಷವಾಗಿ ಇಲ್ಲವೇ ಪ್ರತ್ಯಕ್ಷವಾಗಿ ಒಪ್ಪಿ

ಕೊಂಡರೂ, ಆ ನಂತರ ಇವರು ಮಾಡಿದ್ದರಲ್ಲಿ ರಾಜಕೀಯ ಕೈವಾಡವಿರಬಹುದೇ ಎಂಬ ಸಂಶಯ ಬರತಕ್ಕಂಥಾದ್ದು ಸ್ವಾಭಾವಿಕವೆಂದು ಹೇಳಬಹುದು ರಾಜ್ಯದ ಮುಖ್ಯ ಮಂತ್ರಿಯವರು ರದ್ದು ಮಾಡುತ್ತೇವೆಂದು ಹೇಳಿದಾಗ ಇದರ ಬಗ್ಗೆ ಸ್ವಲ್ಪ ಸಂಶಯವನ್ನು ವ್ಯಕ್ತಪಡಿಸಬೇಕಾಗುತ್ತದೆ.

೩–೦೦ ಪಿ. ಎಂ.

ಕರ್ನಾಟಕ ರಾಜ್ಯದಲ್ಲಿರತಕ್ಕ ಆಹಾರ ಕಾರ್ಪೊರೇಷನ್ನಿನ ಸ್ಥಿತಿ ಹೇಗಿದೆ ಅಂದರೆ, ಕ್ಷಯರೋಗದ ವ್ಯಕ್ತಿಯ ಸ್ಥಿತಿಯಂತೆ ಚಿಂತಾಜನಕವಾಗಿದೆ ಎಷ್ಟೇ ಔಷಧಿ ಕೊಟ್ಟರೂ ವಾಸಿಯಾಗುವಂತಿಲ್ಲ ಆ ನಿಗಮಕ್ಕೆ ಶ್ರೀನಿವಾಸನ್ ಎನ್ನುವವರು ಅಧ್ಯಕ್ಷರಾಗಿದ್ದರು, ಈ ನಿಗಮದಲ್ಲಿ ಎರಡುಕೋಟಿ ರೂಪಾಯಿ ಗಳಷ್ಟು ಅವ್ಯವಹಾರ ನಡೆದಿದೆ, ಭ್ರಷ್ಟಾಚಾರ ನಡೆದಿದೆ, ಇದನ್ನು ಸಿ. ಓ. ಡಿ ತನಿಖೆಗೆ ಒಪ್ಪಿಸಿದರೆ ಮಾತ್ರ ಬಯಲಿಗೆ ಬರುತ್ತದೆಂದು ನಿಗಮದ ಅಧ್ಯಕ್ಷರು ಹೇಳಿದ್ದಾರೆ, ಈ ಬಗ್ಗೆ ಸಿ ಓ. ಡಿ. ತನಿಖೆ ಯಾಗಲೀ, ಸಮಗ್ರವಾದಂಥ ಪೂರ್ಣವಾದಂಥ ತನಿಖೆಯಾಗಲೀ ರಾಜ್ಯ ಸರ್ಕಾರದಿಂದ ನಡೆಯಲಿಲ್ಲ. ಇದಕ್ಕೆ ಕಾರಣ ಏನು ಎನ್ನುವುದರ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಬಡವರಿಗೆ ಅಗ್ಗದ ದರದಲ್ಲಿ ಬಟ್ಟೆ ಸೀರೆ, ಅಕ್ಕಿಯನ್ನು ಕೊಡುತ್ತೇನೆಂದು ಹೇಳಿದ್ದೀರಿ, ಮತ್ತೊಂದು ಕಡೆ ಆಹಾರ ನಿಗಮದಲ್ಲಿ ಎರಡು ಕೋಟಿ ರೂಪಾಯಿಗಳ ಭ್ರಷ್ಟಾಚಾರ ನಡೆದಿದ್ದು, ಅವ್ಯವಹಾರ ನಡೆ ದಿದ್ದರೂ, ಅದರ ಬಗ್ಗೆ ತನಿಖೆ ಮಾಡುವಂಥ ಸೌಜನ್ಯತೆಯನ್ನು ಆ ಒಂದು ಹೃದಯವಂತಿಕೆಯನ್ನು ತೋರಿಸಿಲ್ಲ ಎಂದರೆ, ನಿಮಗೆ ಬಡವರ ಬಗ್ಗೆ ಇರತಕ್ಕ ಕಾಳಜಿ ಬಗ್ಗೆ ಪ್ರಶ್ನೆ ಮಾಡಬೇಕಾಗುತ್ತದೆ, ಮತ್ತು ಸಂಶಯ ಕೂಡ ವ್ಯಕ್ತ ಮಾಡಬೇಕಾಗುತ್ತದೆ. ಗೋಣಿ ಚೀಲ ಮಾರಾಟದ ವ್ಯವಹಾರದಲ್ಲಿಯೂ ಭ್ರಷ್ಟಾಚಾರ ನಡೆದಿದೆಯೆನ್ನುವ ದೂರು ಇದೆಯೆಂದರೆ, ಇನ್ನು ಅಕ್ಕಿ, ಗೋದಿ ರಾಗಿ ಸಕ್ಕರೆ ಇನ್ನಿತರೆ ವಸ್ತುಗಳು ಎಂದರೆ ಖಾದ್ಯತೈಲಗಳ ಮಾರಾಟದಲ್ಲಿ, ಅಂದರೆ ಪಾಮ್ ಆಯಿಲ್ ಮಾರಾಟದಲ್ಲಿ ಎಷ್ಟೊ ಅವ್ಯವಹಾರ ನಡೆದಿದೆ, ಆಳವಾದಂಥ ಭ್ರಷ್ಟಾಚಾರ ಈ ಇಲಾಖೆಯಲ್ಲಿ ನಡೆದಿದೆ ಎನ್ನುವುದನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ಇನ್ನು ನ್ಯಾಯ ಬೆಲೆ ಅಂಗಡಿಗಳಲ್ಲಿ ಸಿಗತಕ್ಕಂಥ ಎಲ್ಲ ವಸ್ತುಗಳು ಹೇಗೆ ಕಳಪೆಯಾಗಿವೆಯೋ, ಅದೇ ರೀತಿಯಲ್ಲಿ ಕಲಬೆರೆಕೆಯಿಂದಲೂ ಕೂಡಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಲಬೆರಕೆ ಶಾಪದಿಂದ ಸಮಾಜಕ್ಕೆ ಮಾರಕವಾಗಿ, ಜನಗಳ ಆರೋಗ್ಯವನ್ನು ಹಾಳು ಮಾಡತಕ್ಕ. ಕುಂದಿಸತಕ್ಕ ಕೆಲಸ ನಡೆಯುತ್ತಿದೆ. ರವೆಯಲ್ಲಿ ಕಬ್ಬಿಣದ ತುಂಡುಗಳು, ಅಕ್ಕಿಯಲ್ಲಿ ಕಲ್ಲು, ಸಕ್ಕರೆಯಲ್ಲಿ ಸೀಮೆ ಸುಣ್ಣದ ಪುಡಿ, ಕೊತ್ತಂಬರಿಯಲ್ಲಿ ಕುದುರೆಲದ್ದಿಯನ್ನು ಬೆರೆಸಿ ಮಾಡು ವಂತಾದ್ದು, ಮಾನ್ಯ ಸಚಿವರ ಗಮನಕ್ಕೆ ಬಂದಿರಬಹುದು. ನಮಗೆ ತಿಳಿದಂತೆ ಉಪ್ಪು ಒಂದು ಬಿಟ್ಟು ತಾಳಿ ಎಣ್ಣೆ ಸೇರಿ ಮತ್ತೆ ಎಲ್ಲ ವಸ್ತುಗಳು ಕಲಬೆರಕೆ ವಸ್ತುಗಳಾಗಿ ರಾರಾಜಿಸುತ್ತಿವೆ. ಬಡವರ ಮನೆಗೆ ಸರಿಯಾಗಿ ಸಿಗದೇ ಇದ್ದರೂಕೂಡ ಕಲಬೆರಕೆ ವಸ್ತುಗಳು ನ್ಯಾಯಬೆಲೆ ಅಂಗಡಿಯಲ್ಲಿ ಸಿಗುತ್ತವೆ, ಇದರ ಬಗ್ಗೆ ಆಹಾರ ಇಲಾಖೆ ಮತ್ತು ಆರೋಗ್ಯ ಇಲಾಖೆ ಯಾವರೀತಿಯ ಕ್ರಮಗಳನ್ನು ಕೈಗೊಂಡಿವೆ? ಪ್ರಿವೆನ್‌ಷನ್ ಆಫ್ ಅಡಲ್ಟ್ರೇಷನ್ ಫುಡ್ ಆಕ್ಟ್ ನಾಮಕಾವಸ್ತೆಗೆ ಇದೆ. ಈ ಕಾನೂನು ಪ್ರಕಾರ ಎಷ್ಟು ಜನರನ್ನು ಬಂಧಿಸಿದ್ದೀರಿ ? ಎಷ್ಟು ಆರೋಪಗಳನ್ನು ಸಾಬೀತು ಮಾಡಿದ್ದೀರಿ, ಎಷ್ಟು ಕೇಸು ಗಳನ್ನು ದಾಖಲು ಮಾಡಿದ್ದೀರಿ. ಇವತ್ತು ಜನರ ಆರೋಗ್ಯದ ಪ್ರಶ್ನೆ, ಜನರ ಆರ್ಥಿಕ ಹಾನಿ ಪ್ರಶ್ನೆ ಇದೆ. ಫುಡ್ ಅಡಲ್ಟ್ರೇಷನ್ ಆಕ್ಟ್ ನಾಮಕಾವಸ್ತೆಗೆ ಇರದೇ ಚೆನ್ನಾಗಿ ಕೆಲಸ ಮಾಡಿದರೆ ಕಲಬೆರಕೆ ಯನ್ನು ತಹಬಂದಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಅಳತೆ ಮತ್ತು ತೂಕದಲ್ಲಿ ಕೂಡ ಕರ್ನಾಟಕ ರಾಜ್ಯದಲ್ಲಿ ೪೦ ಪರ್ಸೆಂಟ್ ಮೋಸ ಆಗುತ್ತಿದೆ. ಕೇರಳದಲ್ಲಿ ೧೫ ಪರ್ಸೆಂಟ್ ತೂಕ ಮತ್ತು ಅಳತೆಯಲ್ಲಿ ಮೋಸವಾಗುತ್ತಿದೆ. ಈ ವಿಚಾರದಲ್ಲಿ ಕೂಡ ಸರ್ಕಾರದವರು ಹೆಚ್ಚು ಗಮನ ಕೊಡ ಬೇಕೆಂದು ಹೇಳುತ್ತೇನೆ. ೧೯೮೪ರಲ್ಲಿ ಕರ್ನಾಟಕ ರಾಜ್ಯದಲ್ಲಿ ಗ್ರಾಹಕರ ಹಿತರಕ್ಷಣಾ ಮಂಡಳಿ ಅಸ್ತಿತ್ವದಲ್ಲಿ ಬಂದಿದೆ, ಹಾಲಿನ ಸರಬರಾಜು, ಅಗತ್ಯ ವಸ್ತುಗಳ ಹಂಚಿಕೆ, ವಿದ್ಯುತ್ ಉಪಕರಣಗಳು, ಔಷಧಿ, ನೀರು ವಿದ್ಯುಚ್ಛಕ್ತಿ ಇವೆಲ್ಲವುಗಳ ಹಿತರಕ್ಷಣೆಯನ್ನು ಮಾಡುವುದಕ್ಕಾಗಿ ಗ್ರಾಹಕರ ಹಿತರಕ್ಷಣೆ ಮಂಡಲಿ ದೂರುಗಳನ್ನು ಸ್ವೀಕಾರ ಮಾಡುವುದು ಅವುಗಳ ಬಗ್ಗೆ ವಿಚಾರಣೆ ಮಾಡುವುದು. ಇದಕ್ಕೆ ಸರ್ಕಾರ ಕೊಟ್ಟಿರತಕ್ಕ ಹಣ ಎಷ್ಟು ಎಂದರೆ ಕೇವಲ ೫ ಲಕ್ಷ ಮಾತ್ರ ಕೊಟ್ಟಿದ್ದಾರೆ. ಸರ್ಕಾರದ ಆದೇಶ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಸುಮಾರು ೨೭,೦೦೦ ಹಳ್ಳಿಗಳಲ್ಲಿ ಗ್ರಾಹಕರ ಹಿತರಕ್ಷಣಾ ಮಂಡಲಿ ತನ್ನ ಶಾಖೆಗಳನ್ನು ತೆರೆದು ಸಾಹಿತ್ಯ ಮತ್ತು ಪ್ರಚಾರ ಸಾಧನಗಳ ಮುಖಾಂತರ ಗ್ರಾಹಕರ ಹಕ್ಕುಗಳನ್ನು

ಚಲಾಯಿಸತಕ್ಕ ಒಂದು ವ್ಯವಸ್ಥೆಯನ್ನು ಈ ಮಂಡಲಿ ಮಾಡಬೇಕಾಗಿದೆ. ಇಂಥ ಒಂದು ಸಂಸ್ಥೆಗೆ ೫ ಲಕ್ಷ ಮಾತ್ರ ಕೊಟ್ಟಿದ್ದೀರಿ. ಪಾನ ನಿರೋಧ ಮಂಡಲಿಗೆ ೧೮ ಲಕ್ಷ ರೂಪಾಯಿ ಆರ್ಥಿಕ ವ್ಯವಸ್ಥೆ ಸಿಕ್ಕಿದೆ ಆದರೆ, ಗ್ರಾಹಕರ ಹಿತರಕ್ಷಣಾ ಮಂಡಲಿಗೆ ಕೊಟ್ಟಿರತಕ್ಕ ಇಷ್ಟು ಅಲ್ಪ ಹಣದಿಂದ ಯಾವುದೇ ಕೆಲಸವನ್ನು ಕೂಡ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ. ಅಲ್ಲಿ ಇಲ್ಲಿ ಸ್ವಲ್ಪ ಕೆಲಸ ಮಾಡಿದರೆ ಉಪಯೋಗವಾಗುವುದಿಲ್ಲ. ಇದರಿಂದ ನೀತಿ ಸೂತ್ರಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಸಾಧ್ಯವಿಲ್ಲ. ಮಂಡಲಿಗೆ ಹೆಚ್ಚು ಅಧಿಕಾರವನ್ನು ಮತ್ತು ಹೆಚ್ಚು ಹಣವನ್ನು ಕೊಟ್ಟರೆ, ಗ್ರಾಹಕರಿಂದ ಯಾವುದೇ ರೀತಿಯ ದೂರುಗಳು ಬಂದರೂ ಅವುಗಳ ಬಗ್ಗೆ ಸಮಂಜಸವಾದಂಥ ಉತ್ತರ ಕೊಡುವುದರ ಜೊತೆಗೆ ಮಾರ್ಗಗಳನ್ನು ಕೂಡ ಕಂಡುಹಿಡಿದು, ಸಮಸ್ಯೆಗೆ ಪರಿಹಾರ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಜೊತೆಗೆ ಸಾಮಾನ್ಯ ಜನಗಳಿಗೆ ಸುರಕ್ಷತೆಯ ಹಕ್ಕು, ಅರಿವಿನ ಹಕ್ಕುಗಳನ್ನು ಗ್ರಾಹಕರಿಗೆ ಮನದಟ್ಟು ಮಾಡಿಕೊಟ್ಟರೆ ಇದಕ್ಕೆ ಅರ್ಥ ಬರುತ್ತದೆ. ಮಂಡಲಿ ತನ್ನ ಕೆಲಸವನ್ನು ಚನ್ನಾಗಿ ಮಾಡಿದರೆ, ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟ ಇಲಾಖೆಗೆ ಒಳ್ಳೆಯ ಹೆಸರು ಬರುತ್ತದೆಂದು ತಮ್ಮ ಗಮನಕ್ಕೆ ತರುತ್ತೇನೆ. ಇನ್ನು ಸಿಮೆಂಟಿನ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಸಿಮೆಂಟನ್ನು ಮೂರು ತಿಂಗಳಿಗೊಮ್ಮೆ ಹಂಚಿಕೆ ಮಾಡುತ್ತಾರೆ. ಶಿವಮೊಗ್ಗಕ್ಕೆ ಅಮ್ಮಸಂದ್ರ ಸಿಮೆಂಟನ್ನು ಕೊಡುತ್ತಾರೆ. ಸಿಮೆಂಟ್ ಸರಬರಾಜು ಮಾಡುವುದರಲ್ಲಿ, ಕೋಟಾವನ್ನು ಕೊಡಬೇಕಾದರೆ ೧೫ ದಿವಸಗಳ ಕಾಲ ಲಾರಿಗಳನ್ನು ಕಾಯಿಸುತ್ತಾರೆ. ಮೂರು ತಿಂಗಳ ಕೊನೆ ಭಾಗದಲ್ಲಿ ಹೋದರೆ, ಕೋಟಾ ಮುಗಿದು ಹೋಗಿದೆ, ಮುಂದೆ ಕೊಡಲಾಗುವುದೆಂದು ತಿಳಿಸುತ್ತಾರೆ. ನಮಗೆ ಕೊಡತಕ್ಕ ೮೦೦ ಮೆಟ್ರಿಕ್ ಟನ್‌ನಲ್ಲಿ ಕೂಡ ಖೋತಾ ಮಾಡಿದ್ದಾರೆ, ಅದನ್ನು ತುಂಬಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಸಿಮೆಂಟ್ ಜೊತೆಗೆ ಬೂದಿ ಮಿಶ್ರಣ ಮಾಡತಕ್ಕಂಥಾದ್ದು ಕಲ್ಲನ್ನು ಮಿಶ್ರಣಮಾಡತಕ್ಕಂಥಾದ್ದು ನಡೆಯುತ್ತಿದೆ. ಇದು ಬಹಳ ಗಂಭೀರವಾದಂಥ ವಿಚಾರ. ಕೊರಿಯ ಸಿಮೆಂಟ್ ಕೂಡ ನೋಡಿದ್ದೇವೆ. ಎಷ್ಟು ಕೆ.ಜಿ. ಇರುತ್ತದೋ ಅಷ್ಟು ಸುರಕ್ಷಿತವಾಗಿರುತ್ತದೆ ಭದ್ರಾವತಿ ಸಿಮೆಂಟಿನಲ್ಲಿ ೫೦ ಕೆ.ಜಿ. ಇದ್ದರೆ. ೪೦ ಕೆ ಜಿ ಇರುತ್ತದೆ. ಗೋಣಿಚೀಲ ಕೂಡ ಚೆನ್ನಾಗಿರುವುದಿಲ್ಲ, ತೂಕದಲ್ಲಿ ಮೋಸ ಇರುತ್ತದೆ. ಇನ್ನು ಸಮಗ್ರ ಗಿರಿಜನರ ಅಭಿವೃದ್ಧಿ ಯೋಜನೆ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದು. ಈ ಯೋಜನೆಯ ಮೂಲಕ ಗಿರಿಜನರಿಗೆ ಅದರ ಫಲವನ್ನು ತಲುಪಿಸತಕ್ಕ ವ್ಯವಸ್ಥೆಯನ್ನು ಸರ್ಕಾರ ಸಮರ್ಪಕವಾಗಿ ಮಾಡಬೇಕೆಂದು ತಮ್ಮ ಮುಂದೆ ಇಡುತ್ತೇನೆ. ಹಸಿರು ಕಾರ್ಡನ್ನು ಗುರುತಿಸತಕ್ಕ ಕೆಲಸವನ್ನು ಫೆಬ್ರುವರಿ ತಿಂಗಳಲ್ಲಿ ಮಾಡಿ ಮುಗಿಸಿಯೆಂದು ಸರ್ಕಾರಿ ಅಧಿಕಾರಿಗಳಿಗೆ ಆದೇಶ ನೀಡಲಾಗಿದೆಯೆಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಈ ಕೆಲಸ ಕಾರ್ಯಗಳು ಈವರೆವಿಗೂ ಸಂಪೂರ್ಣವಾಗಿ ಪೂರ್ಣಗೊಂಡಿಲ್ಲ. ಹಸಿರು ಕಾರ್ಡನ್ನು ಗುರುತಿಸತಕ್ಕ ಕೆಲಸವನ್ನು ಅಧಿಕಾರಿಗಳು ಸಮರ್ಪಕವಾಗಿ ಮಾಡಿಲ್ಲ. ಸಲವಾರು ನೆಪಗಳನ್ನು ಒಡ್ಡಿ ಪ್ರಯೋಜನದ ಅಡಿಯಲ್ಲಿ ಬರತಕ್ಕ ಬಡವರನ್ನು ಕೂಲಿಗಾರರನ್ನು, ಕೃಷಿಕಾರ್ಮಿಕರನ್ನು ಈ ಯೋಜನೆಯ ಅಡಿಯಲ್ಲಿ ತರತಕ್ಕ ಕೆಲಸವನ್ನು ಸಮರ್ಪಕವಾಗಿ ಇದುವರೆವಿಗೂ ಸಂಬಂಧಪಟ್ಟ ಅಧಿಕಾರಿಗಳು ಮಾಡಿಲ್ಲ. ಆದರೆ ಅವರು ಆ ಬಗ್ಗೆ ಮಾಡಿದ್ದೇವೆಂದು ಹೇಳಿದ್ದಾರೆ ಹಾಗಾದರೆ ಎಷ್ಟು ಮಾಡಿದ್ದಾರೆ ಎಂಬ ಅಂಕಿಅಂಶಗಳನ್ನು ಪುಸ್ತಕದಲ್ಲಿ ಇವರು ಪ್ರಕಟ ಮಾಡಬಹುದಾಗಿತ್ತಲ್ಲ ಒಂದು ಹಾರಿಕೆಯ ಮಾತನ್ನು ಈ ಪುಸ್ತಕದಲ್ಲಿ ಮುದ್ರಿಸಿ ಹಾಕಿದ್ದಾರೆ. ಈ ಹಸಿರು ಕಾರ್ಡನ್ನು ಗುರುತಿಸತಕ್ಕ ಕೆಲಸ ಬಹಳ ಒಳ್ಳೆಯ ಕೆಲಸ ಅದನ್ನು ಕೂಡಲೇ ಮಾಡಿದರೆ ಮಾನ್ಯ ಸಚಿವರಿಗೆ ಒಳ್ಳೆಯ ಹೆಸರು ಬರುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಜೊತೆಗೆ ಪ್ರತಿಯೊಂದು ಊರಿನಲ್ಲಿ ನ್ಯಾಯ ಬೆಲೆಯ ಅಂಗಡಿಗಳಿಗೆ ಕಾವಲು ಸಮಿತಿಯನ್ನು ಮಾಡಿದ್ದೇವೆಂದು ಮಾನ್ಯ ಸಚಿವರು ತಮ್ಮ ಪುಸ್ತಕದಲ್ಲಿ ಹೇಳಿದ್ದಾರೆ ನನ್ನ ತಾಲ್ಲೂಕಿನಲ್ಲಿ ಯಾವ ಕಾವಲು ಸಮಿತಿಯೂ ಇಲ್ಲ. ಹಾಗಾದರೆ ಎಲ್ಲಿ ಮಾಡಿದ್ದಾರೆ ? ಯಾವ ಊರಿಗೆ ಮಾಡಿದ್ದಾರೆ ? ಯಾವ ಜಿಲ್ಲೆಗೆ ಮಾಡಿದ್ದಾರೆ ? ಎನ್ನುವುದು ಕೂಡ ಒಂದು ಪ್ರಶ್ನಾರ್ಥಕವಾದ ವಿಚಾರ. ಆದ್ದರಿಂದ ಮಾನ್ಯ ಸಚಿವರು ಈ ವಿಚಾರವಾಗಿ ಪುಸ್ತಕದಲ್ಲಿ ಏತಕ್ಕೆ ಪ್ರಸ್ತಾಪ ಮಾಡಿದ್ದಾರೋ ಗೊತ್ತಿಲ್ಲ. ಅಂತೂ ಕಾವಲು ಸಮಿತಿಯನ್ನು ನೇಮಕ ಮಾಡುವಂತಹದ್ದು ಒಳ್ಳೆಯ ಕೆಲಸ ಆ ಕೆಲಸವನ್ನು ಕೂಡಲೇ ಮಾಡತಕ್ಕ ಒಂದು ಜವಾಬ್ದಾರಿಯನ್ನು ನಮ್ಮ ಸಚಿವರು ತೆಗೆದುಕೊಳ್ಳಬೇಕು ಇತ್ತೀಚೆಗೆ ತಾವು ಕೊಟ್ಟಿರುವ ಸೀರೆ ಏನು ಇದೆ ಅದನ್ನು ಒಂದು ಸಲ ಒಗೆದಾಗ ಅದರ ಅವಸ್ಥೆ ತಾವು ನೋಡಬೇಕು. ಮಾನ್ಯ ಸಚಿವರಲ್ಲಿ ನನ್ನದೊಂದು ಬಿನ್ನಹ, ಒಂದು ಸಲ ಒಗೆದಿರತಕ್ಕ ಸೀರೆಯನ್ನು ತಾವು ಕಣ್ಣು ತುಂಬಾ ನೋಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿಬಿಟ್ಟರೆ ನಿಜಕ್ಕೂ ದುಡ್ಡು ಕೊಟ್ಟು ಕೊಂಡಿರತಕ್ಕ ಜನರಿಗೆ ಸಂತೋಷವಾಗುತ್ತದೆ. ಜೊತೆಗೆ ನಿಮಗೆ

ಬಡವರಿಗೆ ಕೊಟ್ಟಿದ್ದೇವಲ್ಲಾ ಎನ್ನುವ ತೃಪ್ತಿ ಮನಸ್ಸಿಗೆ ಸಿಗುತ್ತದೆ. ಇನ್ನು ಗಂಡಸರಿಗೆ ಶರಟು ಕೊಡುತ್ತಿದ್ದಾರೆ ಆ ಶರಟಿನಿಂದ ಹೆಂಗಸರು ಲಂಗ ಮಾಡಿ ಹೊಲೆಸಿಕೊಳ್ಳುತ್ತಿದ್ದಾರೆ. ಗಂಡಸರಿಗೆ ಇತ್ತ ಕಡೆ ಶರಟೂ ಇಲ್ಲ.

ಒಂದು ಸಾರಿ ಸೀರೆ ಹೊಗೆದರೆ ಮತ್ತೆ ಆ ಸೀರೆಯನ್ನು ಉಟ್ಟುಕೊಳ್ಳುವ ಹಾಗಿಲ್ಲ ಅಂಥ ಪರಿಸ್ಥಿತಿಯಾಗಿದೆ. ಆ ರೀತಿ ಬಡವರನ್ನು ಅಕ್ಕಿ ಹಂಚಿಕೆಯಲ್ಲಿ ಒಂದು ರೀತಿ ನಡೆಸಿಕೊಳ್ಳುವುದು, ಬಟ್ಟೆ ಹಂಚುವುದರಲ್ಲಿ ಒಂದು ರೀತಿ ನಡೆಸಿಕೊಳ್ಳುವುದನ್ನು ನೋಡಿದರೆ ನಿಜಕ್ಕೂ ಬಡವರ ಬಗ್ಗೆ ಇರುವ ಕಳಕಳಿಯನ್ನು ನೋಡಿದರೆ ನನಗೆ ಒಂದು ರೀತಿಯ ಸಂಶಯ ಬರುತ್ತದೆ, ಇದರಲ್ಲಿ ಏನೋ ಒಂದು ದೋಷ ಇದೆ ಯಾವ ಕಾರಣಕ್ಕೋಸ್ಕರ ಹೀಗೆ ಆಗುತ್ತಿದೆ ಎಂಬುದನ್ನು ನಾವು ಸಂಶಯದಿಂದ ನೋಡುವ ಕೆಲಸ ಮಾಡಬೇಕಾಗುತ್ತದೆ ಮತ್ತೊಂದು ವಿಷಯ ಸಚಿವರ ಗಮನಕ್ಕೆ ಬಂದಿದೆಯೆಂದು ಕಾಣುತ್ತದೆ. ಪಟ್ಟಣ ಪ್ರದೇಶದಲ್ಲಿರತಕ್ಕ ಒಂದು ಕುಟುಂಬಕ್ಕೆ ಆರು ಕೆ ಜಿ. ಸಕ್ಕರೆಯನ್ನು ಕೊಡುತ್ತಾರೆ. ಅದೇ ಹಳ್ಳಿಗಾಡಿನಲ್ಲಿ ನಾವು ಏನು ಇದ್ದೇವೆ ನಮಗೆ ಒಂದು ಕುಟುಂಬಕ್ಕೆ ಕೇವಲ ಎರಡು ಕೆ ಜಿ. ಸಕ್ಕರೆಯನ್ನು ಕೊಡುತ್ತಾರೆ. ಇದು ಯಾವ ನ್ಯಾಯ ? ಈ ರೀತಿ ಭೇದ ಮಾಡತಕ್ಕ ಕೆಲಸ ಸರಿಯಲ್ಲ. ಪಟ್ಟಣ ಪ್ರದೇಶದ ಜನರ ಮತ್ತು ಗ್ರಾಮಾಂತರ ಪ್ರದೇಶದ ಜನರ ಅಭಿರುಚಿಗಳನ್ನು, ಭಾವನೆಗಳನ್ನು ಭೇದ ಮಾಡಿ ಅವರಲ್ಲಿ ಯಾವ ಸೊಗಸನ್ನು ಕಂಡಿದ್ದೀರಿ ಎಂಬುದನ್ನು ಇಲ್ಲಿ ಪ್ರಶ್ನೆ ಮಾಡುತ್ತೇನೆ. ಇವತ್ತು ಬೆಲ್ಲದ ರೇಟ್ ಕೂಡ ಜಾಸ್ತಿಯಾಗಿದೆ. ನಾವು ಸಕ್ಕರೆ ಹಾಕಿಕೊಂಡು ಟೀ ಕುಡಿಯೋಣ ಎಂದರೆ ಒಂದು ಕುಟುಂಬಕ್ಕೆ ಎರಡು ಕೆ ಜಿ. ಸಕ್ಕರೆಯನ್ನು ಕೊಡುತ್ತಿದ್ದಾರೆ. ಆದ್ದರಿಂದ ಮಾನ್ಯ ಸಚಿವರು ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರವನ್ನು ಇವರು ಏಕಾಏಕಿ ತಮ್ಮ ಭಾಷಣದಲ್ಲಿ, ಪತ್ರಿಕೆಗಳಲ್ಲಿ, ರೇಡಿಯೋಗಳಲ್ಲಿ ದೋಷಣೆ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದವರು ಸುಮಾರು ೫೧ ಕೋಟಿ ರೂಪಾಯಿಗಳನ್ನು ಬರಗಾಲಕ್ಕೆ ಕೊಟ್ಟಿದ್ದಾರೆ. ಇವತ್ತು ಪತ್ರಿಕೆಗಳಲ್ಲಿ ಬಂದಿದೆ. ಬರಗಾಲಕ್ಕೆ ಕೊಟ್ಟಿರುವ ೪೦–೪೨ ಸಾವಿರ ರೂಪಾಯಿಗಳಿಗೆ ಈವರೆವಿಗೂ ಯಾವುದೇ ರೀತಿಯ ಲೆಕ್ಕ ಪತ್ರಗಳನ್ನು ಕೇಂದ್ರ ಸರ್ಕಾರಕ್ಕೆ ಒದಗಿಸಿಲ್ಲ ಎನ್ನತಕ್ಕ ಮಾತು ಪತ್ರಿಕೆಗಳಲ್ಲಿ ಬಂದಿದೆ. ಮತ್ತೊಂದು ವಿಷಯವನ್ನು ತಿಳಿಯಬಯಸುತ್ತೇನೆ. ಕಾಂಗ್ರೆಸ್ ಸರ್ಕಾರ ಇದ್ದಾಗ ಕೇಂದ್ರದಿಂದ ೧೦ ಸಾವಿರ ಟನ್ ಅಕ್ಕಿ ಸರಬರಾಜಾಗುತ್ತಿತ್ತು. ಇವತ್ತು ಇವರ ಸರ್ಕಾರಕ್ಕೆ ೪೫ ಸಾವಿರ ಟನ್ ಅಕ್ಕಿಯನ್ನು ಸರಬರಾಜು ಮಾಡಲಾಗಿದೆ. ಇವರು ಏಕಾಏಕಿ ಕೇಂದ್ರ ಸರ್ಕಾರವನ್ನು ದೋಷಣೆ ಮಾಡತಕ್ಕದ್ದು ಎಷ್ಟೊಂದು ಸಮಂಜಸ ಎಂಬುದು ಕರ್ನಾಟಕ ಜನತೆಗೆ ಗೊತ್ತಾಗಬೇಕು. ಇವತ್ತು ಜನತಾ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ೪೫ ಸಾವಿರ ಟನ್ ಅಕ್ಕಿಯನ್ನು ಪಡೆಯುತ್ತಾ ಇದೆ. ಈ ವಿಷಯ ಸಾರ್ವಜನಿಕರು, ಸಾಮಾನ್ಯ ಜನರು ತಿಳಿಯಬೇಕಾದರೆ, ನಾವು ಸಭೆ ಸಮಾರಂಭಗಳ ಮುಖಾಂತರ ಜನಗಳಿಗೆ ತಿಳಿಸಬೇಕಾಗುತ್ತದೆ. ದಯವಿಟ್ಟು ಕೇಂದ್ರ ಸರ್ಕಾರ ನಮಗೆ ಸಹಾಯ ಮಾಡಲಿಲ್ಲವೆಂದು ತಪ್ಪು ತಿಳುವಳಿಕೆ ಬರತಕ್ಕ ಹೇಳಿಕೆಗಳನ್ನು ಪತ್ರಿಕೆಗಳಲ್ಲಿ, ರೇಡಿಯೋಗಳಲ್ಲಿ, ಭಾಷಣದ ಮುಖಾಂತರ ಜನಗಳಿಗೆ ತಿಳಿಸತಕ್ಕ ಕೆಲಸವನ್ನು ಮಾನ್ಯ ಸರ್ಕಾರದವರಾಗಲೀ, ಸಚಿವರಾಗಲೀ ಮಾಡಬಾರದು ಎನ್ನುವ ಮಾತನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸಾರಿಗೆ ಇಲಾಖೆಯ ಬಗ್ಗೆ ಹೇಳುತ್ತೇನೆ. ಈ ಇಲಾಖೆಯ ಸಚಿವರು ಯುವಕರು, ದಷ್ಟಪುಷ್ಟರು, ಜೊತೆಗೆ ಏನಾದರೂ ಸಾಧನೆ ಮಾಡಬೇಕು, ಹೆಸರು ತೆಗೆದುಕೊಳ್ಳಬೇಕು ಎನ್ನತಕ್ಕ ಮನೋಭಾವದಿಂದ ಸಾರಿಗೆ ಇಲಾಖೆಯ ಮಂತ್ರಿಗಳಾಗಿ ಅಧಿಕಾರ ಸ್ವೀಕಾರ ಮಾಡಿದ ಕೂಡಲೇ ಕರ್ನಾಟಕ ರಾಜ್ಯದ ಜನತೆಗೆ ಒಂದು ಸವಾಲನ್ನು ಎಸೆದು ಹೇಳಿದರು. ''ಈ ಇಲಾಖೆಯಲ್ಲಿ ಲಾಭವನ್ನು ತೋರಿಸುತ್ತೇನೆ ಒಂದು ವೇಳೆ ಈ ರೀತಿ ಲಾಭವನ್ನು ತೋರಿಸಲಿಕ್ಕೆ ಸಾಧ್ಯವಿಲ್ಲದೆ ಹೋದರೆ ನಾನು ರಾಜೀನಾಮೆಯನ್ನು ಕೊಟ್ಟು ನನ್ನ ಸ್ಥಾನದಿಂದ ಕೆಳಕ್ಕೆ ಇಳಿಯುತ್ತೇನೆ'' ಎನ್ನುವ ಮಾತನ್ನು ಪಂಥವಾಗಿ ಸವಾಲನ್ನು ಹಾಕಿ ಕರ್ನಾಟಕ ಜನತೆಗೆ ಪತ್ರಿಕೆಗಳ ಮುಖಾಂತರ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದರು. ಆದರೆ ಅವರು ಹೇಳಿದ ಎರಡರಲ್ಲಿ ಒಂದನ್ನೂ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಲಾಭ ಮಾಡುವುದಕ್ಕೆ ಆಗಲಿಲ್ಲ. ಜೊತೆಗೆ ರಾಜೀನಾಮೆಯನ್ನೂ ಕೊಡಲಿಲ್ಲ ನಮ್ಮ ಸಚಿವರು ಬಹಳ ಸ್ವಾಭಿಮಾನಿಗಳು ನಾವು ಕೇಳತಕ್ಕ ಪ್ರಶ್ನೆ ಸ್ವಲ್ಪ ಹೆಚ್ಚು ಕಮ್ಮಿಯಾದರ ಸಾರಿಗೆ ಬಸ್ ಮೇಲೆ ಬರುವ ಹಾಗೆ ಹೇಳುತ್ತಾರೆ. ಅದು ಸಿಟ್ಟಿನಿಂದಲೋ ಅಥವಾ ಸಹೋದರ ಭಾವನೆಯಿಂದಲೋ ಗೊತ್ತಿಲ್ಲ. ರಾಜೀನಾಮೆ ಕೊಟ್ಟು

ವಾಪಸ್ ಬಂದಿದ್ದರೆ ಚಿಂತೆ ಇರಲಿಲ್ಲ. ಒಂದು ವೇಳೆ ರಾಜೀನಾಮೆ ಕೊಟ್ಟು ವಾಪಸ್ ಇಲ್ಲಿಗೆ ಬಂದಿದ್ದರೆ ಅವರು ಹೇಳುತ್ತಿದ್ದದ್ದು—ನಾನು ರಾಜೀನಾಮೆಯನ್ನು ಕೊಟ್ಟಿದ್ದೆ, ಆಗ ಸಂಬಂಧಪಟ್ಟ ಮಂತ್ರಿಗಳು ನಮ್ಮ ಜಿಲ್ಲೆಯ ಶಾಸಕರುಗಳು ಗೋಳೋ ಅಂತ ಅತ್ತುಬಿಟ್ಟರು. ಮಂತ್ರಿಗಳೇ ತಾವು ಹೋದರೆ ನಮ್ಮ ಇಲಾಖೆ ಖಂಡಿತವಾಗಿ ಉಳಿಯುವುದಿಲ್ಲ ಎಂದು ಉಪವಾಸ, ಸತ್ಯಾಗ್ರಹ ಮಾಡಿದರು, ಅದಕ್ಕೋಸ್ಕರ ನಾನು ರಾಜೀನಾಮೆಯನ್ನು ವಾಪಸ್ ತೆಗೆದುಕೊಂಡೆಯೆಂದು ಹೇಳಿದ್ದರೆ ನಿಜಕ್ಕೂ ಕೂಡ ನಾವು ಅಂಥ ಕರುಣ ಮಂತ್ರಿಗಳ ಮೇಲೆ ನಾವು ಏನನ್ನೂ ಹೇಳುವುದಕ್ಕೆ ಆಗುತ್ತಿರಲಿಲ್ಲ. ಅಧ್ಯಕ್ಷರೇ ನನಗನಿಸುತ್ತದೆ, ಈ ಇಲಾಖೆಯಲ್ಲಿ ಏನಾದರೂ ಮಾಡಬೇಕು ಎನ್ನತಕ್ಕ ಒಂದು ಒಳ್ಳೆಯ ಮನಸ್ಸನ್ನು ಇಟ್ಟುಕೊಂಡು ಬಂದಿರತಕ್ಕ ಮಾನ್ಯ ಸಚಿವರು ತಮ್ಮ ಕಾರ್ಯಸಾಧನೆಯಲ್ಲಿ ವೈಫಲ್ಯವನ್ನು ಕಂಡಾಗ ಇಂತಹ ಕಾರಣಗಳಿಂದ ನಷ್ಟ ಅನುಭವಿಸುತ್ತಾ ಇದೆ ಎನ್ನುವುದನ್ನು ಸಂಶೋಧನೆ ಮಾಡಿ ಸಚಿತ್ರವಾದ ವಿಚಾರವನ್ನು ಈ ಸದನದಲ್ಲಿ ಮಂಡಿಸಬೇಕಾಗಿತ್ತು. ಈ ಇಲಾಖೆಯಲ್ಲಿ ಲಾಭ ಮಾಡುವುದಕ್ಕೆ ಖಂಡಿತವಾಗಿ ಯಾರಿಗೂ ಸಾಧ್ಯವಿಲ್ಲ, ನನಗೂ ಕೂಡ ಸಾಧ್ಯವಾಗಲಿಲ್ಲವೆಂದು ತಮ್ಮ ತಪ್ಪನ್ನು ಒಪ್ಪಿಕೊಳ್ಳಬೇಕಾಗಿತ್ತು. ಈ ಇಲಾಖೆಯಲ್ಲಿ ಲಾಭ ಮಾಡುವುದಕ್ಕೆ ನನ್ನಿಂದ ಆಗಲಿಲ್ಲವೆಂದು ತಮ್ಮ ಮಾತಿನಂತೆ ಅಧಿಕಾರ ಬಿಟ್ಟು ಅವರು ಕೆಳಕ್ಕೆ ಇಳಿಯಬೇಕು. ಈ ಮೂರು ಕೆಲಸಗಳನ್ನು ನಮ್ಮ ಮಾನ್ಯ ಸಚಿವರು ಮಾಡಲಿಲ್ಲವಾದ್ದರಿಂದ ಅದರ ಬಗ್ಗೆ ಹೇಳುವುದಕ್ಕೆ ನನಗೆ ವಿಷಾದವಾಗುತ್ತದೆ. ಅವರು ಪ್ರಾಯಶಃ ತಮ್ಮ ಮಾತನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಈ ಮಾತನ್ನು ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಜೊತೆಗೆ ಸಾರಿಗೆ ಇಲಾಖೆಯಲ್ಲಿ ವಿಭಾಗಗಳನ್ನು ಮಾಡಿದ್ದಾರೆ. ಆದರಲ್ಲಿ ಒಂದು ಕೆಲಸವನ್ನು ಮಾಡಬೇಕು. ಅಲ್ಲಿ ಇರುವ ಪರಸ್ಪರ ಪೈಪೋಟಿ ಅಥವಾ ಸ್ಪರ್ಧಾತ್ಮಕವಾಗಿರತಕ್ಕ ಭಾವನೆಗಳನ್ನು ವಿವಿಧ ವಿಭಾಗಗಳಲ್ಲಿ ಉಂಟು ಮಾಡಿದ್ದೇ ಆದರೆ ಇವರು ಖಂಡಿತವಾಗಿ ಲಾಭವನ್ನು ಪಡೆಯುತಕ್ಕ ಕೆಲಸವನ್ನು ಮಾಡಬಹುದು. ಸರ್ಕಾರವು ಮಂಜೂರು ಮಾಡತಕ್ಕ ಹಣವು ನೇರವಾಗಿ ಲಾಭಗಳಿಸುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕು. ಪ್ರತಿಯೊಂದು ವಿಭಾಗವನ್ನು ಬೇರೆ ಬೇರೆ ಮಾಡಿ ಅದರ ಕಾರ್ಯಚಟುವಟಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸಬೇಕಾಗುತ್ತದೆ. ನಂತರ ನಷ್ಟದ ಕಾರಣವೇನು ? ಹಾಗೂ ಲಾಭದ ಕಾರಣವೇನು ? ಎಂಬುದನ್ನು ತನಿಖೆ ಮಾಡಿ ನಷ್ಟವನ್ನು ಲಾಭವನ್ನಾಗಿ ಪರಿವರ್ತಿಸಲು ಬೇಕಾದಂತಹ ಯೋಜನೆಗಳನ್ನು ಹಾಕಿಕೊಂಡರೆ ಮಾತ್ರ ಈ ಸಂಸ್ಥೆಯು ಹೆಚ್ಚು ಕ್ರಿಯಾತ್ಮಕವಾಗಿ ಕೆಲಸ ಮಾಡಿ ಲಾಭವನ್ನು ಗಳಿಸುತ್ತದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ.

ಇವತ್ತು ಕೆಂಪುಮೂತಿಯ ಬಸ್ಸು ಹೋಗತಕ್ಕ ವೇಗವನ್ನು ನೋಡಿದರೆ ನಮಗೆ ಹೆದರಿಕೆಯಾಗುತ್ತದೆ. ಬಸ್ಸು ಹೋಗತಕ್ಕ ವೇಗ ಏನಿದೆ ಅದನ್ನು ನೋಡಿ ಲಾಭ ಲೆಕ್ಕ ಹಾಕಿದರೆ ಲಾಭ ಮಾತ್ರ ಕೆಳಕ್ಕೆ ಹೋಗುತ್ತದೆ. ಅದೊಂದು ಅಪಘಾತ ಮಾಡತಕ್ಕ ವೇಗ. ಬಸ್ಸನ್ನು ನಿರ್ವಹಣೆ ಮಾಡತಕ್ಕ ಅದರ ಕಂಡೀಷನ್ ನೋಡಿಕೊಳ್ಳತಕ್ಕ ಕೆಲಸಕಾರ್ಯಗಳು ಇವತ್ತು ಸಮರ್ಪಕವಾಗಿ ಆಗುತ್ತಿಲ್ಲ. ಬಿ.ಟಿ.ಎಸ್. ನಲ್ಲಾಗಲೀ, ಕೆ.ಎಸ್.ಆರ್.ಟಿ.ಸಿ. ಯಲ್ಲಾಗಲೀ ಕಂಡಕ್ಟರುಗಳು ಮತ್ತು ಡ್ರೈವರ್‌ಗಳು ಸಾರ್ವಜನಿಕರ ಜೊತೆ ಸಭ್ಯ ರೀತಿಯಲ್ಲಿ ವರ್ತಿಸತಕ್ಕ ಕೆಲಸವನ್ನು ಮಾಡುತ್ತಿಲ್ಲ. ಡ್ರೈವರ್‌ಗಳು ಬಸ್ಸುಗಳನ್ನು ಉದಾಸೀನ ಮನೋಭಾವನೆಯಿಂದ ಚಾಲನೆ ಮಾಡುತ್ತಾರೆ. ಸಹೃದಯ ಮನೋಭಾವನೆ ಕಂಡಕ್ಟರುಗಳಿಗೆ ಮತ್ತು ಡ್ರೈವರ್‌ಗಳಿಗೆ ಇಲ್ಲ. ಸರ್ಕಾರದವರು ಈ ಕಡೆಗೆ ಸೂಕ್ತ ಗಮನವನ್ನು ಹರಿಸಬೇಕು ನಿರ್ವಹಣೆ ಕೆಲಸಕಾರ್ಯಗಳನ್ನು ದಕ್ಷ ಅಧಿಕಾರಿಗಳ ಕೈಗೆ ಕೊಟ್ಟರೆ ಬಸ್‌ನ ಅಪಘಡ ಮತ್ತು ಅಪಘಾತ ಕಡಿಮೆಯಾಗುತ್ತದೆಂದು ಮಾನ್ಯ ಸಾರಿಗೆ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಛೇರ್ಮನ್.—ತಾವು ಜಾಸ್ತಿ ಸಮಯವನ್ನು ತೆಗೆದುಕೊಂಡಿದ್ದೀರಿ, ಬೇಗನೆ ಮುಗಿಸಿ.

ಶ್ರೀ ಪಟಮಕ್ಕಿ ರತ್ನಾಕರ್.—ಸುಮಾರು ೪೫ ಪರ್ಸೆಂಟ್ ಸಾರಿಗೆ ದರ ಏರಿಕೆಯಾಗಿದೆ. ಇದರಿಂದ ಸಾಮಾನ್ಯ ಜನರಿಗೆ ಮತ್ತು ಬಡವರಿಗೆ ಹೊರೆಯಾಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಗಮನಹರಿಸಿ ಕಾರ್ಯಕ್ರಮವನ್ನು ಹಾಕಿಕೊಂಡರೆ ಸುಮಾರು ೮ ಲಕ್ಷ ರೂಪಾಯಿಗಳನ್ನು ಒಂದು ದಿವಸಕ್ಕೆ ಲಾಭ ಮಾಡಬಹುದೆಂದು ಕಾಣುತ್ತದೆ. ಈ ಕೆಲಸವನ್ನು ಮಾಡಲಿಕ್ಕೆ ನಮ್ಮ ತರುಣ ಮಂತ್ರಿಗಳು ಆ ಒಂದು ಭಾವನೆಯನ್ನು ಇಟ್ಟುಕೊಂಡಿದ್ದಾರೆ. ಮುಂದಿನ ವರ್ಷ ನಮ್ಮ ಸಚಿವರು ಸಾರಿಗೆ

ಇಲಾಖೆಯಲ್ಲಿ ಲಾಭವನ್ನು ತೋರಿಸಿ ಈ ಸದನದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಎಲ್ಲ ಜನರ ದೃಷ್ಟಿಯಲ್ಲಿ ಒಳ್ಳೆಯ ಹೆಸರು ಪಡೆಯುತ್ತಾರೆ ಆ ನಿಟ್ಟಿನಲ್ಲಿ ಕೆಲಸವನ್ನು ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

